ಜನಮನದ ದನಿ


# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

13 ಏಪ್ರಿಲ್ 2026 ಸೋಮವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 34 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629




ಮುಂಬೈ ಇಂಡಿಯನ್ಸ್ ವಿರುದ್ಧ ಭಾನುವಾರ ವಾಂಖೆಡೆ ಕ್ರೀಡಾಂಗಣದಲ್ಲಿ ನಡೆದ ಐಪಿಎಲ್ ಪಂದ್ಯದಲ್ಲಿ ಭರ್ಜರಿ ಅರ್ಧ ಶತಕ (78 ರನ್) ಗಳಿಸಿದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಫಿಲಿಪ್ ಸ್ಟಾಲ್...



ಅರಣ್ಯದಲ್ಲಿ ಶರಣ್ಯ ಮತ್ತು ಇತರ ಕಥೆಗಳು

» 2



ಮಾತುಕತೆ ವಿಫಲ : ಇರಾನ್ -ಅಮೇರಿಕಾ ನಿಯೋಗ ವಾಪಾಸ್



ನಟ ವಿಜಯ್ ರ್‍ಯಾಲಿಗಳು ರದ್ದು : ವರ್ಕ್ ಫ್ರಮ್ ಹೋಮ್ ಪ್ರಚಾರ ಎಂದು ಡಿಎಂಕೆ ಲೇವಡಿ

# ಗ್ಯಾರಂಟಿ ಜೊತೆಗೆ ಸಾಲದ ಹೊರೆಯೂ ಅಧಿಕ

## ಗ್ರಾಮೀಣ ಬದುಕು ಇನ್ನೂ ಸುಧಾರಿಸಿಲ್ಲ | ಕಾಂಗ್ರೆಸ್ ವಿರುದ್ಧ ಹೆಚ್.ಡಿ.ಕುಮಾರಸ್ವಾಮಿ ವಾಗ್ದಾಳಿ

• ಪ್ರಜೋದಯ ವರದಿ



**ಚನ್ನರಾಯಪಟ್ಟಣ:** ಪಂಚ ಗ್ಯಾರಂಟಿಗಳ ಮೂಲಕ ರಾಜ್ಯ ಅಭಿವೃದ್ಧಿಯಾಗುತ್ತಿದೆ ಎನ್ನುತ್ತಿರುವ ಕಾಂಗ್ರೆಸ್‌ನವರು ಅದರ ಹಿಂದೆ ಸಾಲವನ್ನು ಅಷ್ಟೇ ಪ್ರಮಾಣದಲ್ಲಿ ಏರಿಸಿದ್ದಾರೆ. ಸಾರ್ವಜನಿಕರು ಸೂಕ್ಷ್ಮ ಸಂಗತಿಗಳನ್ನು ಅರಿಯಬೇಕೆಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ಹೇಳಿದರು.

ದಂಡಿಗನಹಳ್ಳಿ ಹೋಬಳಿ ದೊಡ್ಡಕರಡೇ ಗ್ರಾಮದಲ್ಲಿ ಭಾನುವಾರ ಏರ್ಪಡಿಸಿದ್ದ ಶ್ರೀ ಲಕ್ಷ್ಮೀ ನಾರಾಯಣ ದೇವಸ್ಥಾನ, ಶ್ರೀ ವರಾಹ ಸಹಿತ ದೇವರ ವಿಗ್ರಹ ಪ್ರಾಣ ಪ್ರತಿಷ್ಠಾನ, ಕುಂಭಾಭಿಷೇಕ ಹಾಗು ನೂತನ ದೇವಾಲಯ ಲೋಕಾರ್ಪಣಾ ಸಮಾರಂಭದಲ್ಲಿ ಮಾತನಾಡಿದ ಅವರು, ಭಾರತ ಆರ್ಥಿಕವಾಗಿ ವೇಗವಾಗಿ ಬೆಳೆಯುತ್ತಿರುವ ವಿಶ್ವದ ಮೂರನೇ ರಾಷ್ಟ್ರ ಎಂಬ ಬಿರುದು ಪಡೆದಿದ್ದರೂ ಗ್ರಾಮೀಣ ಪರಿಸ್ಥಿತಿ ನೆನಪಿಸಿಕೊಂಡರೆ ನಾಚಿಕೆಯಾಗುತ್ತದೆ ಎಂದರು.

ಕಾಂಗ್ರೆಸ್ ಸರ್ಕಾರ ಪಂಚ ಗ್ಯಾರಂಟಿಗಳನ್ನು ಘೋಷಿಸಿದೆ. ಪ್ರತಿ ತಿಂಗಳು ಸ್ತ್ರೀಯರಿಗೆ ಗೃಹ ಲಕ್ಷ್ಮಿ ಹೆಸರಿನಲ್ಲಿ 2 ಸಾವಿರ ರೂ. ಕೊಡುತ್ತಿದ್ದಾರೆ. ಅದರ ಹೊರೆಯನ್ನು ಜನರ ಮೇಲೆಯೇ ಹಾಕುತ್ತಿದ್ದಾರೆ. ಮದ್ಯದ ದರ ನಾಲ್ಕು ಪಟ್ಟು ಹೆಚ್ಚಿಸಿದ್ದಾರೆ. ನೋಂದಣಿ, ವಿದ್ಯುತ್ ಬಿಲ್ ಸೇರಿ ಬೆಲೆ ಏರಿಕೆ ಮಿತಿ ಮೀರಿದೆ. ಒಂದು ಕಡೆಯಿಂದ ಕೊಟ್ಟು ಮತ್ತೊಂದು ಕಡೆಯಿಂದ ಕಿತ್ತುಕೊಳ್ಳುವ ಕೆಲಸ ರಾಜ್ಯದಲ್ಲಿ ನಡೆಯುತ್ತಿದೆ ಎಂದು ಕಾಂಗ್ರೆಸ್ ವಿರುದ್ಧ ಹರಿಹಾಯ್ದ ಕುಮಾರಸ್ವಾಮಿ ಅವರು, ರಾಜ್ಯ ಸರ್ಕಾರ ಪ್ರತಿ ವರ್ಷ 1 ಲಕ್ಷ ಕೋ.ರೂ. ಸಾಲದ ಸುಳಿಗೆ ಸಿಲುಕುತ್ತಿದೆ. ಪ್ರಸ್ತುತ 8 ಲಕ್ಷ 24 ಸಾವಿರ ಕೋ.ರೂ. ಸಾಲದಲ್ಲಿದ್ದೇವೆ. ಹೀಗಾದರೆ ಅಭಿವೃದ್ಧಿ ಹೇಗೆ ಸಾಧ್ಯವೆಂದು ಪ್ರಶ್ನಿಸಿದರು.

**ಯುವಕರಿಗೆ ಹೆಚ್.ಡಿ.ಕೆ.ಕಿವಿಮಾತು**

ಪ್ರತಿನಿತ್ಯ ನಮ್ಮ ಮನೆಗೆ ನೂರಾರು ಜನರು ಬರುತ್ತಾರೆ. ಅಣ್ಣ ಸಾಲ ಮಾಡಿಕೊಂಡಿದ್ದೇವೆ, ಹೇಗಾದರೂ ಮಾಡಿ ಸಹಾಯ ಮಾಡಿ ಎನ್ನುತ್ತಾರೆ. ಮನೆ ಕಟ್ಟಲು ಅಥವಾ ಜಮೀನು ಖರೀದಿಗೆ ಸಾಲ ಮಾಡಿದರೆ ಸರಿ ಎನ್ನಬಹುದು. ಆದರೆ, ಕ್ರಿಕೆಟ್ ಬೆಟ್ಟಿಂಗ್, ಆನ್‌ಲೈನ್ ಗೇಮ್‌ಗಳಿಗೆ ಲಕ್ಷಾಂತರ ರೂಪಾಯಿ ಹೂಡಿ ಆಪತ್ತು ತಂದುಕೊಳ್ಳುತ್ತಿದ್ದಾರೆ. ಯುವ ಸಮುದಾಯ ಯಾವ ದಿಕ್ಕಿನಲ್ಲಿ ಸಾಗುತ್ತಿದೆ ಎಂದು ಯೋಚಿಸಬೇಕಾಗುತ್ತದೆಂದರು.

ಶ್ರೀಮಂತಿಕೆಯಿಂದ ಒಳ್ಳೆಯ ಬದುಕು ಕಟ್ಟಿಕೊಳ್ಳಲು ಸಾಧ್ಯವಿಲ್ಲ. ಪೋಷಕರು ಮಕ್ಕಳನ್ನು ಸರಿಯಾದ ದಾರಿಯಲ್ಲಿ ಬೆಳೆಸಬೇಕು. ನೆಮ್ಮದಿ ಬದುಕಿಗೆ ದುಡ್ಡು ನೆರವಾಗುವುದಿಲ್ಲ. ಸಂಸ್ಕಾರ, ಆಚಾರ-ವಿಚಾರ, ಧಾರ್ಮಿಕ ಪರಂಪರೆ ಮುಖ್ಯವಾಗುತ್ತದೆಂದು ಕಿವಿಮಾತು ಹೇಳಿದರು.

### ಕಷ್ಟದ ದಿನಗಳನ್ನು ಸ್ಮರಿಸಿದ ಹೆಚ್.ಡಿ.ಕೆ.

ಈಗ ಪ್ರತಿದಿನ ಕೆಟ್ಟ ಸುದ್ದಿಗಳನ್ನೇ ಕೇಳುತ್ತಿದ್ದೇವೆ. ತಂದೆ-ಮಕ್ಕಳ ಜಗಳ, ದಾಂಪತ್ಯದಲ್ಲಿ ಬಿರುಕು, ಆಸ್ತಿಗಾಗಿ ಹೊಡೆದಾಟದಂತಹ ವಿದ್ಯಮಾನಗಳೇ ಹೆಚ್ಚುತ್ತಿವೆ. ನಮ್ಮ ಬಾಲ್ಯದ ದಿನಗಳು ತುಂಬಾ ಕಷ್ಟಕರವಾಗಿದ್ದವು. ಗ್ರಾಮದಲ್ಲಿ ಬೆಳಕಿನ ವ್ಯವಸ್ಥೆ ಇರುತ್ತಿರಲಿಲ್ಲ. ಆಗ ಕುಡಿಯುವ ನೀರಿಗೆ ಕೆರೆ ಹುಡುಕಿ ಹೋಗಬೇಕಿತ್ತು. ಒಂದು ಕಡೆ ದನ ತೊಳೆಯುತ್ತಿದ್ದರೆ, ಮತ್ತೊಂದೆಡೆ ಮನೆಗೆ ನೀರು ತೆಗೆದುಕೊಂಡು ಹೋಗಿ ಅದರಿಂದಲೇ ಅಡುಗೆ ಮಾಡಬೇಕಿತ್ತು. ಕುಟುಂಬದ 20 ರಿಂದ 30 ಜನರು ಒಟ್ಟಿಗೆ ಕುಳಿತು ಊಟ ಮಾಡುತ್ತಿದ್ದೆವು. ಪರಸ್ಪರ ಸ್ನೇಹ, ಬಾಂಧವ್ಯ ಗಟ್ಟಿಯಾಗಿರುತ್ತಿತ್ತು. ಆದರೆ, ಈಗ ಎಲ್ಲಾ ಸೌಲಭ್ಯವಿದ್ದರೂ ನೆಮ್ಮದಿ ಹುಡುಕುವಂತಾಗಿದೆ. ದುಡ್ಡು ಇಲ್ಲದಿದ್ದರೂ ನಮ್ಮ ಬಾಲ್ಯದ ಜೀವನ ಸುಖಮಯವಾಗಿತ್ತು ಎಂದು ಹೆಚ್.ಡಿ.ಕುಮಾರಸ್ವಾಮಿ ನೆನಪಿಸಿಕೊಂಡರು.

ನಾನು ಎಲ್ಲೇ ಇದ್ದರೂ ಜಿಲ್ಲೆಯ ಜನರ ಋಣ ಮರೆಯುವುದಿಲ್ಲ. ಜಿಲ್ಲೆಯ ಜನರ ಕಷ್ಟಗಳನ್ನು ನಾವು ಬಾಲ್ಯದಿಂದಲೂ ಗಮನಿಸಿದ್ದೇವೆ. ಹಿರಿಯರ ಹಾಗು ಭಗವಂತನ ಆಶೀರ್ವಾದದಿಂದ ಆಕಸ್ಮಿಕವಾಗಿ ರಾಜಕೀಯಕ್ಕೆ ಬಂದಿದ್ದೇನೆ. ಎರಡು ಬಾರಿ ಮುಖ್ಯಮಂತ್ರಿ ಆಗಿದ್ದೇನೆಯಾದರೂ ಜನರ ಆಶೀರ್ವಾದ ಇರಲಿಲ್ಲ. ಒಂದು ಬಾರಿ 19 ಹಾಗು ಮತ್ತೊಮ್ಮೆ 14 ತಿಂಗಳು ಮುಖ್ಯಮಂತ್ರಿ ಆಗಿದ್ದೆ. ಪೂರ್ಣ ಬಹುತಮದ ಸರ್ಕಾರ ನನ್ನದಾಗಿದ್ದರೆ ಅಭಿವೃದ್ಧಿಗೆ ಮತ್ತಷ್ಟು ವೇಗ ಸಿಗುತ್ತಿತ್ತು ಎಂದರು.

1962ರಿಂದ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರನ್ನು ಕಾಪಾಡಿಕೊಂಡು ಬಂದಿದ್ದೀರಿ. 10 ತಿಂಗಳು ಪ್ರಧಾನಿ, 18 ತಿಂಗಳು ಮುಖ್ಯಮಂತ್ರಿ, 3 ವರ್ಷ ನೀರಾವರಿ ಮಂತ್ರಿಯಾಗಿ ಕೆಲಸ ಮಾಡಿದ ಅವರು ಈಗ ವಿಶ್ವದಾದ್ಯಂತ ಪ್ರಸಿದ್ಧಿ ಪಡೆದಿದ್ದಾರೆ. ಸಾಮಾನ್ಯ ಕುಟುಂಬದಿಂದ ಬಂದಿರುವ ನಮ್ಮನ್ನು ಇಷ್ಟು ಎತ್ತರಕ್ಕೆ ಬೆಳೆಸಿದ ಕೀರ್ತಿ ಜಿಲ್ಲೆಯ ಜನರಿಗೆ ಸಲ್ಲುತ್ತದೆಂದರು.

ಶಾಸಕರಾದ ಹೆಚ್.ಡಿ.ರೇವಣ್ಣ, ಸಿ.ಎನ್. ಬಾಲಕೃಷ್ಣ, ವಿಧಾನ ಪರಿಷತ್ ಸದಸ್ಯ ಸೂರಜ್ ರೇವಣ್ಣ ಹಾಗೂ ಪಕ್ಷದ ಮುಖಂಡರು, ಗ್ರಾಮಸ್ಥರು ಹಾಜರಿದ್ದರು.

# ಗಾಯಕಿ ಆಶಾ ಭೋಸ್ಲೆ ನಿಧನ

• ಪ್ರಜೋದಯ ವರದಿ



**ಮುಂಬೈ:** ಬಹು ಅಂಗಾಂಗ ವೈಫಲ್ಯದಿಂದ ಬಳಲುತ್ತಿದ್ದ ಭಾರತದ ಜನಪ್ರಿಯ ಗಾಯಕಿ ಆಶಾ ಭೋಸ್ಲೆ (92) ಅವರು ಭಾನುವಾರ ನಿಧನರಾದರು.

ಇತ್ತೀಚೆಗೆ ಹೃದಯ ಸ್ತಂಭನದಿಂದಾಗಿ ಬ್ರೀಚ್ ಕ್ಯಾಂಡಿ ಆಸ್ಪತ್ರೆಗೆ ಅವರು ದಾಖಲಾಗಿದ್ದರು. ಎಂಟು ದಶಕಗಳಿಗೂ ಹೆಚ್ಚು ಕಾಲ ವೃತ್ತಿ ಜೀವನವನ್ನು ಹೊಂದಿದ್ದ ಆಶಾ ಭೋಸ್ಲೆ ವಿವಿಧ ಭಾರತೀಯ ಭಾಷೆಗಳಲ್ಲಿ 12 ಸಾವಿರಕ್ಕೂ ಅಧಿಕ ಹಾಡುಗಳನ್ನು ಹಾಡಿದ್ದಾರೆ. ಅವರ ದಮ್ ಮಾರೋ ದಮ್, ಪಿಯಾ ತೂ ಅಬ್ ತೋ ಆಜಾ ಮತ್ತು ಚುರಾ ಲಿಯಾ ಹೈ ತುಮ್ನೆ ನಂತಹ ಹಾಡುಗಳು ನಿತ್ಯಹರಿದ್ವರ್ಣವಾಗಿ ಉಳಿದಿವೆ. ಆಶಾ ಭೋಸ್ಲೆಯವರ ಸಂಗೀತ ಪಯಣ ಸುಲಭವಾಗಿರಲಿಲ್ಲ.

ಆಶಾ ಭೋಸ್ಲೆ ಅವರು ಖ್ಯಾತ ರಂಗಭೂಮಿ ನಟ ಮತ್ತು ಶಾಸ್ತ್ರೀಯ ಗಾಯಕಿ ದೀನನಾಥ್ ಮಂಗೇಶ್ಕರ್ ಅವರ ಪುತ್ರಿ ಮತ್ತು ಪ್ರಸಿದ್ಧ ಗಾಯಕಿ ಲತಾ ಮಂಗೇಶ್ಕರ್ ಅವರ ತಂಗಿ. ಅವರು ಕೇವಲ ಒಂಬತ್ತು ವರ್ಷದವಳಿದ್ದಾಗ ಅವರ ತಂದೆ ನಿಧನರಾದರು, ಇದು ಕುಟುಂಬವನ್ನು ಪೋಷಿಸಲು ತಮ್ಮ ಸಹೋದರಿ ಲತಾ ಮಂಗೇಶ್ಕರ್ ಅವರೊಂದಿಗೆ ಹಾಡಲು ಪ್ರಾರಂಭಿಸಲು ಕಾರಣವಾಯಿತು.

ವಿಶಿಷ್ಟ ಧ್ವನಿ ಹಾಗು ವಿಭಿನ್ನ ಗಾಯನ ಶೈಲಿಯಿಂದಲೇ ಹೆಸರುವಾಸಿಯಾಗಿದ ಆಶಾ ಭೋಸ್ಲೆ ಅವರಿಗೆ ಪದ್ಮ ವಿಭೂಷಣ, ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ ಸೇರಿ ಹಲವು ಗೌರವಗಳು ಸಂದಿವೆ. ಅತ್ಯಧಿಕ ರೆಕಾರ್ಡಿಂಗ್ ಹಾಡುಗಳ ಒಡತಿ ಎಂಬ ಗಿನ್ನಿಸ್ ದಾಖಲೆಯನ್ನೂ ಬರೆದಿದ್ದರು. ಅವರು ಖ್ಯಾತ ಗಾಯಕಿ ಲತಾ ಮಂಗೇಶ್ಕರ್ ಅವರ ಕಿರಿಯ ಸಹೋದರಿಯಾಗಿದ್ದಾರೆ.

1950 ಮತ್ತು 1990 ರ ನಡುವೆ, ಆಶಾ ಭೋಸ್ಲೆ ಒ.ಪಿ. ನಯ್ಯರ್, ಆರ್.ಡಿ. ಬರ್ಮನ್, ಖಯ್ಯಾಮ್ ಮತ್ತು ಬಪ್ಪಿ ಲಹಿರಿ ಸೇರಿ ಹಲವಾರು ಸಂಯೋಜಕರೊಂದಿಗೆ ಕೆಲಸ ಮಾಡಿದ್ದಾರೆ. ಅವರು ಅನೇಕ ಸ್ಮರಣೀಯ ಹಾಡುಗಳನ್ನು ಹಾಡಿದ್ದಾರೆ.

ಆಶಾ ಅವರ ನಿಧನಕ್ಕೆ ರಾಷ್ಟ್ರಪತಿ ಶ್ರೀಮತಿ ದ್ರೌಪದಿ ಮುರ್ಮು, ಪ್ರಧಾನ ಮಂತ್ರಿ ನರೇಂದ್ರ ಮೋದಿ ಸೇರಿ ಹಲವು ಗಣ್ಯರು, ಬಾಲಿವುಡ್ ದಿಗ್ಗಜರು ಕಂಬನಿ ಮಿಡಿದಿದ್ದಾರೆ.

# ಮಸೀದಿ ಸಹಬಾಳ್ವೆಯ ಸಂದೇಶ ಸಾರುವ ಪವಿತ್ರ ತಾಣ

• ಪ್ರಜೋದಯ ವರದಿ



**ಸಕಲೇಶಪುರ:** ಪಟ್ಟಣದ ಐತಿಹಾಸಿಕ ಜಾಮಿಯಾ ಮಸೀದಿ ಕೇವಲ ಮುಸ್ಲಿಂ ಸಮುದಾಯದ ಪ್ರಾರ್ಥನಾ ಸ್ಥಳವಲ್ಲ, ಸರ್ವ ಸಮುದಾಯಗಳ ನಡುವೆ ಭಾವೈಕ್ಯತೆ ಮತ್ತು ಸಹಬಾಳ್ವೆಯ ಸಂದೇಶ ಸಾರುವ ಪುಣ್ಯ ಕ್ಷೇತ್ರವೆಂದು ಮಾಜಿ ಸಚಿವ ಹೆಚ್.ಕೆ.ಕುಮಾರಸ್ವಾಮಿ ಅವರು ಹೇಳಿದರು.

ಪಟ್ಟಣದಲ್ಲಿ ಜಾಮಿಯಾ ಮಸೀದಿ ಪುನರ್ ನಿರ್ಮಾಣ ಲೋಕಾರ್ಪಣಾ ಸಮಾರಂಭದಲ್ಲಿ ಮಾತನಾಡಿದ ಅವರು, ಮಸೀದಿ ಮಾನವೀಯ ಮೌಲ್ಯಗಳನ್ನು ಪ್ರತಿಪಾದಿಸುವ ಕೇಂದ್ರವಾಗಿದ್ದು, ಸಮಾಜದಲ್ಲಿ ಶಾಂತಿ ಮತ್ತು ಸಹಬಾಳ್ವೆ ಬೆಳೆಸಲು ಸಹಕಾರಿ ಆಗಲಿದೆ ಎಂದರು.

ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ತಾಲ್ಲೂಕು ಅಧ್ಯಕ್ಷ ಮುರಳಿ ಮೋಹನ್ ಅವರು ಮಾತನಾಡಿ, ಭಾರತದ ಶಕ್ತಿ ಅದರ ವೈವಿಧ್ಯತೆಯಲ್ಲಿದೆ. ಧರ್ಮ, ಜಾತಿ, ಭಾಷೆ ವಿಭಿನ್ನವಾದರೂ ಸಂವಿಧಾನ ಎಲ್ಲರನ್ನೂ ಸಮಾನವಾಗಿ ನೋಡುತ್ತದೆ. ಮಸೀದಿ ಉದ್ಘಾಟನೆಗೆ ವಿವಿಧ ಧರ್ಮದ ನಾಯಕರು ಒಂದೇ ವೇದಿಕೆಯಲ್ಲಿ ಭಾಗವಹಿಸಿರುವುದು ರಾಷ್ಟ್ರೀಯ ಏಕತೆಗೆ ಉದಾಹರಣೆ. ಭಾವೈಕ್ಯತೆಯೇ ದೇಶದ ಭದ್ರತೆ ಮತ್ತು ಪ್ರಗತಿಯ ಮೂಲವೆಂದು ಅಭಿಪ್ರಾಯಪಟ್ಟರು.

ಚಿಂತಕ ಯಡೇಹಳ್ಳಿ ಆರ್. ಮಂಜುನಾಥ್ ಅವರು ಮಾತನಾಡಿ, ಗ್ರಾಮೀಣ ಭಾರತದಲ್ಲಿ ಸಹೋದರತ್ವ ಮತ್ತು ಸೌಹಾರ್ದತೆ ಇನ್ನೂ ಜೀವಂತವಾಗಿದೆ. ಸಕಲೇಶಪುರದಲ್ಲಿ ಮಸೀದಿ ದರ್ಶನಕ್ಕೆ ಎಲ್ಲಾ ಧರ್ಮದ ಜನರು ಆಗಮಿಸಿರುವುದು ನಮ್ಮ ಸಂಸ್ಕೃತಿಯ ವೈಶಿಷ್ಟ್ಯ. ಧರ್ಮವು ಮನುಷ್ಯನನ್ನು ವಿಭಜಿಸುವುದಕ್ಕಲ್ಲ, ಒಗ್ಗೂಡಿಸುವುದಕ್ಕಿದೆ ಎಂಬುದನ್ನು ಇಂತಹ ಕಾರ್ಯಕ್ರಮಗಳು ಸಾರುತ್ತವೆಂದು ಹೇಳಿದರು.

ವೀರಶೈವ ಸಮಾಜದ ಮುಖಂಡ ದಿವಾನ್ ದೇವರಾಜ್ ಅವರು ಮಾತನಾಡಿ, ಐತಿಹಾಸಿಕ ಮಸೀದಿಯನ್ನು ಪುನರ್ ನಿರ್ಮಿಸಿರುವುದು ಪಟ್ಟಣದ ಹೆಮ್ಮೆ. ಜಿಲ್ಲೆಯ ಮಟ್ಟದಲ್ಲಿ ಇದು ಗಮನಾರ್ಹ ಧಾರ್ಮಿಕ ಕೇಂದ್ರವಾಗಿ ಬೆಳೆಯಲಿ ಎಂದು ಹಾರೈಸಿ, ಯುವಕರು ಮತ್ತು ವಿದ್ಯಾರ್ಥಿಗಳು ಇಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು ಅಗತ್ಯವಾಗಿದ್ದು, ಧರ್ಮದ ಹೆಸರಿನಲ್ಲಿ ದ್ವೇಷ ಬೀಜ ಬಿತ್ತುವ ಪ್ರಯತ್ನಗಳಿಗೆ ನಾವು ಒಗ್ಗಟ್ಟಿನಿಂದ ಉತ್ತರ ನೀಡಬೇಕು. ಈ ಮಸೀದಿ ಉದ್ಘಾಟನೆ ಶಾಂತಿ, ಸಹಬಾಳ್ವೆ ಮತ್ತು ಸಂವಿಧಾನಾತ್ಮಕ ಮೌಲ್ಯಗಳ ಪ್ರತೀಕವಾಗಿದೆ ಎಂದು ಹೇಳಿದರು.

ಸಕಲೇಶಪುರ ಸ್ವಾಮಿ ದಿವ್ಯ ರಥೋತ್ಸವ ಆಚರಣೆ ಸಮಿತಿಯ ನಂದಿ ಕೃಪಾ ರಾಜು ಅವರು ಮಾತನಾಡಿ, ಮಸೀದಿ ಕೇವಲ ನಮಾಜಿನ ಸ್ಥಳವಲ್ಲ. ಅದು ಸಮಾಜ ಸೇವೆ, ಸಹಾನುಭೂತಿ ಮತ್ತು ಸೌಹಾರ್ದತೆಯ ಕೇಂದ್ರವಾಗಬೇಕು. ಎಲ್ಲಾ ಧರ್ಮದ ಸಹೋದರರು ಮಸೀದಿ ದರ್ಶನ ಮಾಡಿರುವುದು ಪರಸ್ಪರ ನಂಬಿಕೆಯನ್ನು ಬಲಪಡಿಸಿದೆ. ಇಂತಹ ಭಾವೈಕ್ಯತೆ ಸಕಲೇಶಪುರದ ಹೆಮ್ಮೆ ಎಂದರು.

ಉದ್ಘಾಟನಾ ಸಮಾರಂಭದಲ್ಲಿ ವಿವಿಧ ಧರ್ಮದ ಮುಖಂಡರು, ಮಹಿಳೆಯರು, ವಿದ್ಯಾರ್ಥಿಗಳು ಮತ್ತು ಸಮಾಜ ಸೇವಕರು ಭಾಗವಹಿಸಿರುವುದು ವಿಶೇಷವಾಗಿತ್ತು. ಮಸೀದಿ ಸದಾ ಶಾಂತಿ, ಪ್ರೀತಿ ಮತ್ತು ಮಾನವೀಯ ಸಂದೇಶವನ್ನು ಸಾರಲಿದೆ. ಎಲ್ಲರ ಸಹಕಾರದಿಂದ ಈ ಭಾವೈಕ್ಯತೆಯನ್ನು ಮುಂದುವರಿಸುತ್ತೇವೆಂದು ಆಯೋಜಕರು ತಿಳಿಸಿದರು.

ಮಸೀದಿ ಅಧ್ಯಕ್ಷ ಝುಫರ್ ಅಲಿ, ಉಪಾಧ್ಯಕ್ಷ ಸಯ್ಯದ್ ಅಸ್ಲಂ, ಕಾರ್ಯದರ್ಶಿ ಸಯ್ಯದ್ ಅಲಿ ಉದ್ದೀನ್, ಸದಸ್ಯ ಸಲ್ಮಾನ್ ಖಾಲಿದ್, ಶಾಸಕ ಸಿಮೆಂಟ್ ಮಂಜು, ಮಾಜಿ ಶಾಸಕ ಹೆಚ್.ಎಂ. ವಿಶ್ವನಾಥ್, ಪ್ರಾಧಿಕಾರ ಅಧ್ಯಕ್ಷ ಸಯ್ಯದ್ ಮುಫಿಝ್, ಜಿ.ಪಂ. ಸದಸ್ಯೆ ಚಂಚಲ ಕುಮಾರಸ್ವಾಮಿ ಇತರರಿದ್ದರು.

# ಕಣಗುಪ್ಪೆಯಲ್ಲಿ ಕಾಡಾನೆ ದಾಳಿಗೆ ರೈತ ಬಲಿ

## 6 ತಿಂಗಳಲ್ಲಿ ಇಬ್ಬರ ಸಾವು | ಅರಣ್ಯ ಇಲಾಖೆ ವಿರುದ್ಧ ಗ್ರಾಮಸ್ಥರ ಆಕ್ರೋಶ

• ಪ್ರಜೋದಯ ವರದಿ





**ಬೇಲೂರು :** ಕಾಡಾನೆ ದಾಳಿಗೆ ರೈತ ಬಲಿಯಾಗಿರುವ ದಾರುಣ ಘಟನೆ ಅರೇಹಳ್ಳಿ ಹೋಬಳಿ ಕಣಗುಪ್ಪೆ ಗ್ರಾಮದಲ್ಲಿ ಭಾನುವಾರ ಬೆಳಿಗ್ಗೆ ನಡೆದಿದೆ.

ಗ್ರಾಮದ ರಾಜಶೆಟ್ಟಿ (65) ಮೃತಪಟ್ಟಿದ್ದಾರೆ. ಮೂರ್ನಾಲ್ಕು ತಿಂಗಳಿನಿಂದ ಮೂಡಿಗೆರೆ ಭಾಗಕ್ಕೆ ತೆರಳಿದ್ದ ಕಾಡಾನೆ ಗುಂಪು ವಾಪಾಸ್ಸಾಗಿದ್ದು ಜನರು ಭಯಭೀತರಾಗಿದ್ದಾರೆ. ಎಂದಿನಂತೆ ತೋಟದ ಕೆಲಸಕ್ಕೆಂದು ಮನೆಯಿಂದ ತೆರಳಿದ್ದ ರಾಜಶೆಟ್ಟಿಗೆ ಹಿಂದಿನಿಂದ ಬಂದ ಕಾಡಾನೆ ಏಕಾಏಕಿ ದಾಳಿ ನಡೆಸಿದೆ. ಸೊಂಡಿಲಿನಿಂದ ಎತ್ತಿ ಬಿಸಾಡಿ, ನಂತರ ತುಳಿದು ಸಾಯಿಸಿರುವುದಾಗಿ ತಿಳಿದುಬಂದಿದೆ.

ಘಟನೆಯ ಬಳಿಕ ರಾಜಶೆಟ್ಟಿ ಅವರ ಮೃತದೇಹದ ಸ್ವಲ್ಪ ದೂರದಲ್ಲೇ ಕಾಡಾನೆ ನಿಂತಿತ್ತು. ವಿಷಯ ತಿಳಿದು ಸ್ಥಳಕ್ಕೆ ಜನರು ದೌಡಾಯಿಸಿದ್ದರಿಂದ ಆನೆ ಕಾಡಿನತ್ತ ತೆರಳಿತು. ಮೃತ ರಾಜಶೆಟ್ಟಿ ಅವರ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿತ್ತು. ಸುದ್ದಿ ತಿಳಿದು ಸ್ಥಳಕ್ಕೆ ಅರಣ್ಯ ಇಲಾಖೆ ಅಧಿಕಾರಿಗಳು ಹಾಗು ಪೊಲೀಸರು ಭೇಟಿ ನೀಡಿ ಪರಿಶೀಲಿಸದರು.

6 ತಿಂಗಳ ಹಿಂದೆ ಇದೇ ಗ್ರಾಮದಲ್ಲಿ ಕಾಡಾನೆ ದಾಳಿಗೆ ದ್ಯಾವಮ್ಮ ಎಂಬುವವರು ಮೃತಪಟ್ಟಿದ್ದರು.

» ಮೂರನೇ ಪುಟದಲ್ಲಿ

# ಸಾವಿನಲ್ಲೂ ಸಾರ್ಥಕತೆ ಮೆರೆದ ಯುವತಿ

• ಪ್ರಜೋದಯ ವರದಿ



**ಅರಸೀಕೆರೆ:** ರಸ್ತೆ ಅಪಘಾತದಲ್ಲಿ ಗಂಭೀರ ಗಾಯಗೊಂಡಿದ್ದ ಯುವತಿ ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದು, ಅಂಗಾಂಗ ದಾನದ ಮೂಲಕ ಮಾನವೀಯತೆ ಮೆರೆದಿದ್ದಾರೆ.

ತಾಲ್ಲೂಕಿನ ಕಾರೇಹಳ್ಳಿಯ ಮೋನಿಕಾ (18) ಅವರ ಅಂಗಾಂಗಳನ್ನು ದಾನ ಮಾಡಲಾಗಿದೆ. ಏ.5ರಂದು ನಗರದ ಬಿ.ಹೆಚ್.ರಸ್ತೆ ಎಪಿಎಂಸಿ ಮಾರುಕಟ್ಟೆ ಸಮೀಪ ಸಂಭವಿಸಿದ ಅಪಘಾತದಲ್ಲಿ ಮೋನಿಕಾ ತಲೆಗೆ ಬಲವಾದ ಪೆಟ್ಟು ಬಿದ್ದ ಕಾರಣ ಗಂಭೀರ ಗಾಯಗೊಂಡಿದ್ದರು. ತಕ್ಷಣ ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಿದ್ದರು. ಚಿಕಿತ್ಸೆ ಫಲಕಾರಿ ಯಾಗದೆ ಬ್ರೈನ್ ಡೆತ್ (ಮೆದುಳು ನಿಷ್ಕ್ರಿಯ) ಆಗಿದೆ ಎಂದು ವೈದ್ಯರು ತಿಳಿಸಿದರು. ದುಃಖದಲ್ಲಿದ್ದ ಮೋನಿಕಾಳ ಪೋಷಕರು ತಮ್ಮ ಮಗಳು ಇನ್ನಿಲ್ಲವೆಂಬ ಸತ್ಯವನ್ನು ಅರಗಿಸಿಕೊಂಡು ಅಂಗಾಂಗ ದಾನದ ಮೂಲಕ ಸಾರ್ಥಕತೆ ಮೆರೆದಿದ್ದಾರೆ.

# ದೆಹಲಿಯಲ್ಲಿ ಠಿಕಾಣಿ ಹೂಡಿದ ಸಚಿವಾಕಾಂಕ್ಷಿಗಳು

• ಪ್ರಜೋದಯ ವರದಿ

**ಬೆಂಗಳೂರು:** ಉಪ ಚುನಾವಣೆ ಮುಕ್ತಾಯ ಬೆನ್ನನ್ನೇ ಸಂಪುಟ ಪುನರ್ ರಚನೆಯ ಚರ್ಚೆಗಳು ಗರಿಗೆದರಿದ್ದು, ಸಚಿವ ಸ್ಥಾನದ ಮೇಲೆ ಕಣ್ಣಿಟ್ಟಿರುವ 25 ರಿಂದ 30 ಹಿರಿಯ ಶಾಸಕರು ದೆಹಲಿಯಲ್ಲಿ ಠಿಕಾಣಿ ಹೂಡಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಹೈಕಮಾಂಡ್ ಭೇಟಿಗೆ ತೆರಳುವ ಮುನ್ನವೇ ಶಾಸಕರ ಗುಂಪು ದೆಹಲಿಗೆ ತೆರಳಿರುವುದು ರಾಜ್ಯ ರಾಜಕೀಯದಲ್ಲಿ ತೀವ್ರ ಕುತೂಹಲ ಕೆರಳಿಸಿದೆ. ಕನಿಷ್ಟ ಮೂರಕ್ಕಿಂತ ಹೆಚ್ಚು ಬಾರಿ ಗೆದ್ದಿರುವ ಹಾಗು ಸಚಿವ ಸ್ಥಾನದ ನಿರೀಕ್ಷೆಯಲ್ಲಿರುವ ಈ ಹಿರಿಯ ಶಾಸಕರು ಮೊಕ್ಕಾಂ ಹೂಡಲಿದ್ದಾರೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿಯಾಗಿ ತಮ್ಮ ಬೇಡಿಕೆ ಮಂಡಿಸಲಿದ್ದಾರೆ.

ಏ. 14 ರಂದು ತಮ್ಮ-ತಮ್ಮ ಕ್ಷೇತ್ರಗಳಲ್ಲಿ ನಡೆಯುವ ಡಾ. ಬಿ.ಆರ್. ಅಂಬೇಡ್ಕರ್ ಜಯಂತಿ ಆಚರಣೆಯಲ್ಲಿ ಭಾಗವಹಿಸಬೇಕಿರುವ ಹಿನ್ನಲೆಯಲ್ಲಿ ಸೋಮವಾರ ಸಂಜೆಯೇ ಈ ತಂಡ ರಾಜ್ಯಕ್ಕೆ ಮರಳುವ ಲೆಕ್ಕಾಚಾರದಲ್ಲಿದೆ. ಸೋಮವಾರ ಬೆಳಗಿನ ಜಾವವೂ ಮತ್ತಷ್ಟು ಶಾಸಕರು ದೆಹಲಿಗೆ ತೆರಳಿ ಈ ಗುಂಪನ್ನು ಸೇರಿಕೊಳ್ಳುವ ನಿರೀಕ್ಷೆ ಇದೆ.

ದೆಹಲಿಗೆ ತೆರಳುವ ಮೊದಲು ಮಾತನಾಡಿದ ಹಿರಿಯ ಶಾಸಕ ಟಿ.ಬಿ. ಜಯಚಂದ್ರ ಅವರು, ಸಂಪುಟ ಪುನಾರಚನೆ ಮಾಡುವಂತೆ ಹೈಕಮಾಂಡ್‌ಗೆ ಪ್ರಸ್ತಾವನೆ ಸಲ್ಲಿಸಲಾಗುವುದು. 2028ರ ವಿಧಾನಸಭಾ ಚುನಾವಣೆಗೆ ಇನ್ನು ಎರಡು ವರ್ಷಗಳಿದ್ದು, ಆ ಹೊತ್ತಿಗೆ ಪಕ್ಷದಲ್ಲಿ ಯಾವುದೇ ಭಿನ್ನಾಭಿಪ್ರಾಯ ಮೂಡದಂತೆ ತಡೆಯಲು ಇತರರಿಗೂ ಸಚಿವ ಸಂಪುಟದಲ್ಲಿ ಅವಕಾಶ ನೀಡಬೇಕು ಎಂಬುದು ನಮ್ಮ ಪ್ರಮುಖ ಬೇಡಿಕೆಯಾಗಿದೆ. ಈ ವಿಚಾರವನ್ನು ಮಲ್ಲಿಕಾರ್ಜುನ ಖರ್ಗೆ ಅವರ ಗಮನಕ್ಕೆ ತರಲಿದ್ದೇವೆಂದು ಸ್ಪಷ್ಟಪಡಿಸಿದರು.

# ಅಪಘಾತದಲ್ಲಿ ಗಾಯಗೊಂಡ ವ್ಯಕ್ತಿಗೆ ಹೆಚ್.ಡಿ.ಕೆ. ನೆರವು



**ಬೆಂಗಳೂರು:** ಅಪಘಾತದಲ್ಲಿ ಗಾಯಗೊಂಡು ನರಳಾಡುತ್ತಿದ್ದ ವ್ಯಕ್ತಿಯನ್ನು ಆಸ್ಪತ್ರೆಗೆ ಸೇರಿಸುವ ಮೂಲಕ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಮಾನವೀಯತೆ ಮೆರೆದಿದ್ದಾರೆ.

ಖಾಸಗಿ ಕಾರ್ಯಕ್ರಮದ ನಿಮಿತ್ತ ಚನ್ನರಾಯಪಟ್ಟಣದ ದೊಡ್ಡಕರಡೇ ಗ್ರಾಮಕ್ಕೆ ಬರುತ್ತಿದ್ದಾಗ ರಾಷ್ಟ್ರೀಯ ಹೆದ್ದಾರಿಯಲ್ಲಿ ಆಟೋ ಮತ್ತು ಕಾರು ನಡುವೆ ಸಂಭವಿಸಿದ್ದ ಅಪಘಾತದಲ್ಲಿ ಗಾಯಗೊಂಡಿದ್ದ ವ್ಯಕ್ತಿಯನ್ನು ಆಸ್ಪತ್ರೆಗೆ ದಾಖಲಿಸಲು ನೆರವಾದರು. ಅಪಘಾತದಲ್ಲಿ ಗಾಯಗೊಂಡಿದ್ದ ವಿಕ್ರಂ ಎಂಬ ವ್ಯಕ್ತಿಯನ್ನು ಅರ್ಧ ಗಂಟೆಯಿಂದ ಯಾರೂ ಗಮನಿಸದೆ ರಸ್ತೆಯಲ್ಲಿಯೇ ಇದ್ದಿದ್ದನ್ನ ನೋಡಿ ಪೊಲೀಸ್ ವಾಹನದಲ್ಲಿ ಆದಿಚುಂಚನಗಿರಿ ಆಸ್ಪತ್ರೆಗೆ ಕಳುಹಿಸಿ, ಸೂಕ್ತ ಚಿಕಿತ್ಸೆ ನೀಡುವಂತೆ ಅಲ್ಲಿನ ವೈದ್ಯರಿಗೆ ದೂರವಾಣಿ ಕರೆ ಮಾಡಿ ತಿಳಿಸಿದರು.

## ಬಿಡುಗಡೆಯಾಗದ ಹೆಚ್ಚುವರಿ 100 ಕೋ. ರೂ. | ಇಚ್ಛಾಸಕ್ತಿ ಪ್ರದರ್ಶಿಸದ ಕೇಂದ್ರ ಸರ್ಕಾರ

# ಬೇಲೂರು-ಹಾಸನ ಚತುಷ್ಪಥ ರಸ್ತೆಗೆ ವಿಘ್ನ

ಮಲ್ಲಿಕಾರ್ಜುನ ಕೊಚ್ಚರಗಿ

• ಪ್ರಜೋದಯ ವರದಿ



**ಹಾಸನ:** ಬೇಲೂರು-ಹಾಸನ ಚತುಷ್ಪಥ ಹೆದ್ದಾರಿ ಕಾಮಗಾರಿಗೆ ಎದುರಾಗಿರುವ ವಿಘ್ನ ಪರಿಹಾರ ಕಾಣದೆ ಪ್ರಯಾಣಿಕರ ಬಹುದಿನಗಳ ನಿರೀಕ್ಷೆ ಹುಸಿಯಾಗುತ್ತಲೇ ಇದೆ.

ಪ್ರಮುಖ ಪ್ರವಾಸಿ ತಾಣಗಳಿಗೆ ಸಂಪರ್ಕ ಕಲ್ಪಿಸುವ ರಾಷ್ಟ್ರೀಯ ಹೆದ್ದಾರಿ 373 ರಸ್ತೆಯನ್ನು ಮೇಲ್ದರ್ಜೆಗೇರಿಸಬೇಕೆಂದು ದಶಕಗಳ ಹಿಂದೆಯೇ ಯೋಜನೆ ರೂಪಿಸಲಾಗಿದೆ. ಚತುಷ್ಪಥ ರಸ್ತೆ ನಿರ್ಮಾಣಕ್ಕೆ 635 ಕೋ.ರೂ. ಮಂಜೂರಾಗಿದೆ. ಭೂಸ್ವಾಧೀನ ಪ್ರಕ್ರಿಯೆಗೆ 109 ಕೋ.ರೂ.ಹಣ ಮೀಸಲಿಡಲಾಗಿತ್ತು. ಆದರೆ, ಹಾಸನ ನಗರಸಭೆಯು ಮಹಾನಗರಪಾಲಿಕೆಯಾಗಿ ಮೇಲ್ದರ್ಜೆಗೇರಿದ ಪರಿಣಾಮ ಭೂಮಿಯ ಬೆಲೆ ದುಪ್ಪಟ್ಟಾಗಿ ಭೂಸ್ವಾಧೀನಕ್ಕೆ ಇನ್ನೂ 100 ಕೋ. ರೂ. ಅನುದಾನದ ಅಗತ್ಯವಿದೆ. ಪರಿಷ್ಕೃತ ಅಂದಾಜು ಮೊತ್ತ ಬಿಡುಗಡೆ ಮಾಡುವಂತೆ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರು, ಮಾಜಿ ಸಚಿವ ಹೆಚ್.ಡಿ. ರೇವಣ್ಣ ಅವರು ಹತ್ತಾರು ಬಾರಿ ಕೇಂದ್ರ ಸಾರಿಗೆ ಸಚಿವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದರೂ ಕಾಮಗಾರಿ ಮಾತ್ರ ಆರಂಭಗೊಂಡಿಲ್ಲ.

> "ರಾಷ್ಟ್ರೀಯ ಹೆದ್ದಾರಿ 373 ಚತುಷ್ಪಥ ರಸ್ತೆಯಾಗಿ ಮೇಲ್ದರ್ಜೆಗೇರಿದರೆ ಸಾರ್ವಜನಿಕರಿಗೆ ಸಾಕಷ್ಟು ಅನುಕೂಲವಾಗುತ್ತದೆ. ಈ ಸಂಬಂಧ ನಾನು ಹಲವು ಬಾರಿ ಕೇಂದ್ರ ಸಚಿವರಿಗೆ ಪತ್ರ ಬರೆದಿದ್ದೇನೆ. ಅಧಿಕಾರಿಗಳ ನಿರ್ಲಕ್ಷ್ಯವೂ ಕಾಮಗಾರಿ ವಿಳಂಬಕ್ಕೆ ಕಾರಣವಾಗಿದೆ.
>
> -ಹೆಚ್.ಕೆ.ಸುರೇಶ್, ಶಾಸಕ

ಕ್ಷೇತ್ರದ ಸಂಸದ ಶ್ರೇಯಸ್ ಪಟೇಲ್, ಶಾಸಕ ಹೆಚ್.ಕೆ.ಸುರೇಶ್ ಅವರು ಕೇಂದ್ರ ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರನ್ನು ಹಲವು ಬಾರಿ ಭೇಟಿ ಮಾಡಿದ್ದಾರೆಯಾದರೂ ಪ್ರಯೋಜನವಾಗಿಲ್ಲ. ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರಿಗೂ ಮನವಿ ಸಲ್ಲಿಸಲಾಗಿದೆ. ಅಧಿಕಾರಿಗಳ ಮಟ್ಟದಲ್ಲಿ ಸಾಕಷ್ಟು ಚರ್ಚೆಗಳು ನಡೆದಿವೆ. ರಸ್ತೆ ಅಗಲೀಕರಣಕ್ಕಾಗಿ ಎರಡು ಬದಿಯಲ್ಲಿರುವ ಬೃಹತ್ ಗಾತ್ರದ ಮರಗಳನ್ನು ತೆರವುಗೊಳಿಸಲಾಗುತ್ತಿದೆ. ಆದರೆ, ಭೂಸ್ವಾಧೀನಕ್ಕೆ ಅನುದಾನದ ಅಲಭ್ಯತೆ ಕಾಮಗಾರಿಗೆ ಗ್ರಹಣ ಹಿಡಿಯುವಂತೆ ಮಾಡಿದೆ.

**ಹೇಳ ತೀರದ ಸವಾರರ ಪರಿಸ್ಥಿತಿ**

ಬೇಲೂರಿನ ಚನ್ನಕೇಶವ ಸ್ವಾಮಿ ದೇವಾಲಯ ವೀಕ್ಷಣೆಗೆ ರಾಜ್ಯ ಮಾತ್ರವಲ್ಲದೆ ಹೊರ ದೇಶಗಳಿಂದಲೂ ನಿತ್ಯ ಸಾವಿರಾರು ಪ್ರವಾಸಿಗರು ಬರುವುದರಿಂದ ಬೆಂಗಳೂರಿನಿಂದ ರಸ್ತೆ ಮಾರ್ಗದಲ್ಲೇ ಬರಬೇಕಿದೆ. ಹಾಸನದವರೆಗೆ ಸುಸಜ್ಜಿತ ರಸ್ತೆ ವ್ಯವಸ್ಥೆ ಇದೆಯಾದರೂ ಉಳಿದ 40 ಕಿ.ಮೀ. ಪ್ರಯಾಣ ಸಂಕಷ್ಟ ತಂದೊಡ್ಡುತ್ತಿದೆ. ದಿನೇ ದಿನೇ ವಾಹನ ದಟ್ಟನೆ ಹೆಚ್ಚುತ್ತಿದ್ದು, ಅಪಘಾತಗಳ ಸಂಖ್ಯೆಯೂ ಏರಿಕೆಯಾಗುತ್ತಿದೆ. ಅದರಲ್ಲೂ ವಾರಾಂತ್ಯದಲ್ಲಿ ವಾಹನ ಸಂಚಾರ ಹೆಚ್ಚಾಗಿ ಟ್ರಾಫಿಕ್ ಜಾಮ್‌ನಲ್ಲಿ ಸಿಲುಕಿ ಪ್ರವಾಸಿಗರು ಹಾಗು ಸವಾರರು ಪರದಾಡುವಂತಾಗಿದೆ.

ಹಾಸನದಿಂದ ಹೊಳೆನರಸೀಪುರವರೆಗೆ ಚತುಷ್ಪಥ ರಸ್ತೆ ನಿರ್ಮಾಣ ಮಾಡಲಾಗಿದೆ. ಮುಂದುವರಿದು ಬೇಲೂರಿನವರೆಗೆ ಕಾಮಗಾರಿ ವಿಸ್ತರಿಸಬೇಕಿದೆ. ಬೇಲೂರು ಮೂಲಕ ಚಿಕ್ಕಮಗಳೂರು, ಚಾರ್ಮಾಡಿಘಾಟ್ ಮಾರ್ಗವಾಗಿ ಮಂಗಳೂರು ಭಾಗಕ್ಕೆ ತೆರಳುವ ವಾಹನಗಳು ಈ ರಸ್ತೆಯನ್ನೇ ಅವಲಂಬಿಸಿವೆ. ಸಾರಿಗೆ ಹಾಗು ಖಾಸಗಿ ಬಸ್‌ಗಳು ಸಂಚರಿಸುತ್ತವೆ. ಈಗಿನ ರಸ್ತೆ ಸಂಪೂರ್ಣ ಹಾಳಾಗಿದ್ದು, ಗುಂಡಿ ಬಿದ್ದ ಕಡೆ ತೇಪೆ ಹಾಕಲಾಗಿದೆ. ಕಿರಿದಾದ ರಸ್ತೆಯಾಗಿರುವುದರಿಂದ ಜಾಗೃತೆಯಿಂದ ವಾಹನ ಓಡಿಸಬೇಕಾದ ಅನಿವಾರ್ಯತೆ ಚಾಲಕರದ್ದಾಗಿದೆ.

**ಬೆಂಗಳೂರು ಕಚೇರಿಯಲ್ಲೇ ಕಡತ ಬಾಕಿ**

ಈ ಕಾಮಗಾರಿಗೆ ಟೆಂಡರ್ ನೀಡಲ್ಪಟ್ಟು ಒಪ್ಪಂದ ಆಗಿದ್ದರೂ ಪರಿಷ್ಕೃತ ಅಂದಾಜು ವೆಚ್ಚ ಅನುಮೋದನೆ ಆಗದ ಕಾರಣದಿಂದ ಕಾಮಗಾರಿ ಇನ್ನೂ ಪ್ರಾರಂಭವಾಗಿಲ್ಲ. ಪ್ರಸ್ತುತ ಪ್ರಸ್ತಾವನೆ ಬೆಂಗಳೂರಿನ ಪ್ರಾದೇಶಿಕ ಕಚೇರಿಯಲ್ಲಿ ಭೂಸ್ವಾಧೀನ ಪ್ರಕ್ರಿಯೆ ಪರಿಶೀಲನೆಗಾಗಿ ಬಾಕಿಯಾಗಿದೆ. ಈ ಆಡಳಿತಾತ್ಮಕ ವಿಳಂಬದಿಂದಾಗಿ ಕಾಮಗಾರಿಯ ಆರಂಭ ದಿನಾಂಕ ಘೋಷಣೆ ಆಗದೆ, ಗುತ್ತಿಗೆದಾರರು ಕೆಲಸ ಪ್ರಾರಂಭಿಸಲು ಸಾಧ್ಯವಾಗಿಲ್ಲ.

### ನಿರಂತರ ಸಭೆ ಫಲಿತಾಂಶ ಶೂನ್ಯ

ಬೇಲೂರು-ಹಾಸನ ಚತುಷ್ಪಥ ರಸ್ತೆ ವಿಚಾರವಾಗಿ ಹಾಸನ, ಬೆಂಗಳೂರು ಕಚೇರಿಗಳಲ್ಲಿ ಸರಣಿ ಸಭೆಗಳು ನಡೆದಿವೆ. ಜನಪ್ರತಿನಿಧಿಗಳು ದಿನಾಂಕ ನಿಗದಿಪಡಿಸಿದಾಗ ಸಭೆಗೆ ಹಾಜರಾಗುವ ಅಧಿಕಾರಿಗಳು ತಾಂತ್ರಿಕ ಕಾರಣಗಳನ್ನು ಹೇಳಿ ತಕ್ಷಣದ ಸಮಸ್ಯೆಯಿಂದ ಪಾರಾಗುತ್ತಾರೆ ಹೊರತು ಮುಂದೇನು ಮಾಡಬೇಕೆಂದು ಯೋಚಿಸುವುದಿಲ್ಲ. ಭೂಸ್ವಾಧೀನಕ್ಕೆ ಹೆಚ್ಚುವರಿ ಅನುದಾನ ಬೇಕಿರುವ ವಿಚಾರ ಗೊತ್ತಿದ್ದರೂ ಕೇಂದ್ರ ಸರ್ಕಾರಕ್ಕೆ ಮನವರಿಕೆ ಮಾಡಿಕೊಟ್ಟಿಲ್ಲ. ಕೇವಲ ಜನಪ್ರತಿನಿಧಿಗಳು ಹೋರಾಡಿದರೆ ಕೆಲಸ ಆಗುವುದಿಲ್ಲ. ಸಂಬಂಧಪಟ್ಟ ಅಧಿಕಾರಿಗಳು ಮುತುವರ್ಜಿ ವಹಿಸಬೇಕಿದೆ. ರಸ್ತೆಗಾಗಿ ಸಾಲು ಸಾಲು ಸಭೆಗಳು ನಡೆಯುತ್ತಿವೆ ಹೊರತು ಫಲಿತಾಂಶ ಮಾತ್ರ ಶೂನ್ಯವಾಗಿದೆ.

# ಕರಿ ಮೆಣಸು ಕಳವು

• ಪ್ರಜೋದಯ ವರದಿ

**ಸಕಲೇಶಪುರ:** ಮನೆ ಪಕ್ಕ ಇರಿಸಿದ್ದ 150 ಕೆ.ಜಿ. ಕರಿ ಮೆಣಸು ಕಳವು ಮಾಡಿರುವ ಘಟನೆ ತಾಲ್ಲೂಕಿನ ಯಸಳೂರು ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಎಂ.ಎನ್.ಯೋಗೇಂದ್ರ ಮನೆ ಪಕ್ಕದ ಕೊಠಡಿಯಲ್ಲಿ 20 ಚೀಲ ಕಾಫಿ, 6 ಚೀಲ ಕರಿ ಮೆಣಸು ಇರಿಸಿದ್ದರು. ಏ. 8ರ ರಾತ್ರಿ ಬಂದಿರುವ ಕಳ್ಳರು 3 ಚೀಲ ಮೆಣಸು ಕದ್ದಿದ್ದು ಅದರ ಅಂದಾಜು ಮೌಲ್ಯ 90 ಸಾವಿರ ರೂ. ಆಗಿದೆ. ಯಸಳೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಹುಂಡಿ ಹಣ ಕಳ್ಳತನ

ಹಾಸನ: ದೇವಾಲಯದ ಹುಂಡಿ ಒಡೆದು ಸುಮಾರು 20 ಸಾವಿರ ರೂ. ಕಳವು ಮಾಡಿರುವ ಘಟನೆ ತಾಲ್ಲೂಕಿನ ಯಲಗುಂದ ಗ್ರಾಮದ ಹಳ್ಳದ ರಾಮಲಿಂಗೇಶ್ವರ ಹಾಗು ಚೌಡೇಶ್ವರಿ ದೇವಾಲಯದಲ್ಲಿ ನಡೆದಿದೆ.

ಏ. 9ರ ರಾತ್ರಿ ದೇವಸ್ಥಾನಕ್ಕೆ ಬಂದಿರುವ ಕಳ್ಳರು ಬಾಗಿಲು ಮುರಿದು ಹುಂಡಿ ಒಡೆದಿದ್ದಾರೆ. ಎರಡೂ ದೇವಸ್ಥಾನಗಳ ಹುಂಡಿ ಒಂದೇ ದಿನ ಕಳುವಾಗಿದೆ. ಗ್ರಾಮಾಂತರ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದು, ಆರೋಪಿಗಳ ಪತ್ತೆಗೆ ಬಲೆ ಬೀಸಿದ್ದಾರೆ.



# ಭಾವ ಲಹರಿ

# ಅರಣ್ಯದಲ್ಲಿ ಶರಣ್ಯ ಮತ್ತು ಇತರ ಕಥೆಗಳು

**ಕೋಪೆಕೆ ವಿಮಾನದಲ್ಲಿ ತನ್ನ ಆಸನಕ್ಕೆ ಕಟ್ಟಿಕೊಂಡಿದ್ದ ಸ್ಥಿತಿಯ ಸುಮಾರು 10000 ಅಡಿ ಎತ್ತರದಿಂದ ಆ ದಟ್ಟ ಅರಣ್ಯದೊಳಗೆ ಬಿದ್ದು ಹೋದಳು. ವಿಪರೀತ ಮಳೆಗಾಳಿ. ಈಕೆಯ ಅದೃಷ್ಟ ನೋಡಿ. ಈಕೆಯ ಅಮ್ಮನನ್ನೂ ಸೇರಿಸಿ ವಿಮಾನದಲ್ಲಿದ್ದ ಎಲ್ಲ 92 ಮಂದಿಯೂ ಸತ್ತು ಹೋಗಿದ್ದರು. ಆದರೆ ಇದೆಲ್ಲ ಆಕೆಗೆ ಗೊತ್ತಾದದ್ದು ಹೊರಜಗತ್ತಿಗೆ ಬಂದ ನಂತರವೇ.**

ಕಾಡುದಾರಿ ಕೊಡಗಿನ ತಡಿಯಂಡಮೋಳ್ ಬೆಟ್ಟದ ಅರಣ್ಯದಲ್ಲಿ ನಾಪತ್ತೆಯಾಗಿದ್ದ ಕೇರಳದ ಯುವತಿ ಶರಣ್ಯ ಯಾವ ಅಪಾಯವೂ ಆಗದೆ ಮರಳಿ ಬಂದದ್ದೇ ಸುಮಾರು ಮಂದಿಗೆ ಸಂಕಟ ತಂದಂತಿದೆ. ಕಾನ್ ಸ್ಪಿರಸಿ ಥಿಯರಿಗಳು ಹಾರಾಡಿವೆ. ಕೊಡಗು- ಕೇರಳದ ಗಡಿಭಾಗ ಅತ್ತ ಕೇರಳಿಗರ ಮತ್ತು ಇತ್ತ ಕೊಡ ವರ ತಿಕ್ಕಾಟದ ಜಾಗವೂ ಆಗಿರುವುದರಿಂದ ಇಂಥ ಸಂಚು ಥಿಯರಿಗಳಿಗೆ ಬಹಳಷ್ಟು ಆಸ್ಪದವಿದೆ.

ಯುವತಿಯೊಬ್ಬಳು ಒಂಟಿಯಾಗಿ ಟ್ರೆಕ್ಕಿಂಗ್ ಹೋಗಬಹುದು, ತಪ್ಪಿಸಿಕೊಂಡರೂ ಛಲ-ಉತ್ಸಾಹ ಉಳಿಸಿಕೊಂಡು ಮರಳಿ ಬರಬಹುದು ಎಂಬುದನ್ನು ಕೂಡ ಒಪ್ಪಲು ಸಾಧ್ಯವಿಲ್ಲದ ಪುರುಷ ಅಹಂಕಾರ ಕೂಡ ಈ ಟೀಕೆಗಳ ಹಿಂದೆ ಇರುವಂತಿದೆ. ಟೆಕ್ ಕಂಪನಿಯೊಂದರಲ್ಲಿ ಕೆಲಸ ಮಾಡುವ ಈಕೆ ಕಾಡು ಸುತ್ತಿ ಅಭ್ಯಾಸ ಹೊಂದಿದ್ದವರು.

ಪ್ಯಾನಿಕ್ ಆಗದೆ ಸಮಯಪ್ರಜ್ಞೆ ಉಳಿಸಿಕೊಂಡರೆ ಇಂಥ ಸಂದರ್ಭಗಳಲ್ಲಿ ಒಂಟಿಯಾಗಿ ಬದುಕಿ ಬರುವುದು ಸಾಧ್ಯ ಎಂದು ಈ ಹಿಂದಿನ ಸರ್ವೈವಲ್ ಸ್ಟೋರಿಗಳು ನಿರೂಪಿಸಿವೆ. ವಿಮಾನ ಅಪಘಾತದಲ್ಲಿ ಬದುಕುಳಿದು ಅಮೆಜಾನ್‌ನ ದಟ್ಟ ಕಾಡಿನಲ್ಲಿ 11 ದಿನಗಳ ಕಾಲ ಜೀವ ಉಳಿಸಿಕೊಂಡು ಬಂದ ಜೂಲಿಯನ್ ಕೋಪೆಕೆ ಕತೆ ಕುತೂಹಲಕಾರಿಯಾಗಿದೆ.

ಈಕೆ ಜರ್ಮನ್ ಪ್ರಾಣಿಶಾಸ್ತ್ರಜ್ಞ ದಂಪತಿ ಮಾರಿಯಾ ಕೋಪೆಕೆ ಮತ್ತು ಹಾನ್ಸ್-ವಿಲ್ಹೆಲ್ಮ್ ಕೋಪೆಕೆ ಮಗಳು. ಬಾಲ್ಯದಿಂದಲೂ ಈಕೆ ಹೆತ್ತವರ ಜೊತೆ ಕಾಡಿನ ಒಡನಾಟ ಹೊಂದಿದ್ದವಳೇ. ಈ ಘಟನೆ ಸಂಭವಿಸಿದಾಗ ಅವಳಿಗೆ 17 ವರ್ಷ. ತಾಯಿಯ ಜೊತೆಗೆ ಪೆರು ದೇಶದ ಲಿಮಾದಲ್ಲಿ ಲಾನ್ಸಾ 508 ವಿಮಾನ ಹತ್ತಿದ್ದಳು. ಅವರು ಪೆರು ದೇಶದ ಪಂಗ್ವಾನಾ ಸಂಶೋಧನಾ ಕೇಂದ್ರದಲ್ಲಿದ್ದ ತಂದೆಯನ್ನು ಭೇಟಿ ಮಾಡುವುದಿತ್ತು.

ಮಾರಿಯಾ ಮತ್ತು ಹಾನ್ಸ್-ವಿಲ್ಹೆಲ್ಮ್ ಈ ಸಂಶೋಧನಾ ಕೇಂದ್ರವನ್ನು ಕೆಲವು ವರ್ಷಗಳ ಹಿಂದೆ ಸ್ಥಾಪಿಸಿದ್ದರು. ಆದರೆ ಅವರ ಪ್ರಯಾಣಕ್ಕೆ ದುರಂತ ಎರಗಿತು. ಅದು ಮಳೆಗಾಲ. ವಿಮಾನಕ್ಕೆ ಸಿಡಿಲು ಬಡಿಯಿತು. ಪರಿಣಾಮ ವಿಮಾನ ಗಗನಮಧ್ಯದ ಎಂಜಿನ್ ವಿಫಲವಾಗಿ ಒಡೆದು ಚೂರು ಚೂರಾ ಗುತ್ತಾ ದಟ್ಟ ಅಮೆಜಾನ್ ಕಾಡಿನೊಳಕ್ಕೆ ಪತನಗೊಂಡಿತು.

ಕೋಪೆಕೆ ವಿಮಾನದಲ್ಲಿ ತನ್ನ ಆಸನಕ್ಕೆ ಕಟ್ಟಿಕೊಂಡಿದ್ದ ಸ್ಥಿತಿಯ ಸುಮಾರು 10,000 ಅಡಿ ಎತ್ತರದಿಂದ ಆ ದಟ್ಟ ಅರಣ್ಯದೊಳಗೆ ಬಿದ್ದುಹೋದಳು. ವಿಪರೀತ ಮಳೆಗಾಳಿ. ಈಕೆಯ ಅದೃಷ್ಟ ನೋಡಿ. ಈಕೆಯ ಅಮ್ಮನನ್ನೂ ಸೇರಿಸಿ ವಿಮಾನದಲ್ಲಿದ್ದ ಎಲ್ಲ 92 ಮಂದಿಯೂ ಸತ್ತು ಹೋಗಿದ್ದರು. ಆದರೆ ಇದೆಲ್ಲ ಆಕೆಗೆ ಗೊತ್ತಾದದ್ದು ಹೊರ ಜಗತ್ತಿಗೆ ಬಂದ ನಂತರವೇ. ಯಾಕೆಂದರೆ ಆಕೆ ಕುಳಿತಿದ್ದ ಸೀಟು ಆಕೆಯನ್ನೂ ಕಟ್ಟಿಕೊಂಡು ಅಪಘಾತದ ಜಾಗದಿಂದ ಬಲುದೂರ ಎಲ್ಲಾ ಸಿಡಿದು ಬಿದ್ದಿತ್ತು. ಈಕೆಯ ಪ್ರಜ್ಞೆ ಹೋಗುತ್ತಿತ್ತು, ಬರುತ್ತಿತ್ತು.

ಏನಾಯಿತೆಂದು ಸರಿಯಾಗಿ ತಿಳಿಯಲು ಒಂದು ದಿನವೇ ಬೇಕಾಯಿತು. ಆಕೆಯ ಕಾಲರ್ ಮೂಳೆ ಮುರಿದಿತ್ತು. ಭುಜದ ಮೇಲೆ ಆಳವಾದ ಗಾಯಗಳಾಗಿದ್ದವು. ಅವಳ ಸಂಕಷ್ಟ ಆಗಷ್ಟೇ ಆರಂಭವಾಗಿತ್ತು. ಎರಡನೇ ದಿನಕ್ಕೆ ಆಕೆಗೆ ದಟ್ಟ ಕಾಡಿನ ನಡುವೆ ಇದ್ದೇನೆಂದೂ, ಇಲ್ಲಿ ರಕ್ಷಿಸಲು ಬರುವವರು ಯಾರೂ ಇಲ್ಲವೆಂದೂ (ಇದು 1971ರ ಕತೆ) ಅಂದಾಜಾಯಿತು.

ಆಕಾಶದಲ್ಲಿ, ಮರಗಳ ದಟ್ಟ ಛಾವಣಿಯ ಮೇಲೆ ಎಲ್ಲಾ ವಿಮಾನಗಳ ಸದ್ದು. ಬಹುಶಃ ರಕ್ಷಣಾ ಕಾರ್ಯಾಚರಣೆಗೆ ಬಂದುದಿರಬಹುದು- ಆ ಸದ್ದು ಕೂಡ ನಿಧಾನವಾಗಿ ಕ್ಷೀಣಿಸಿತು. ಬದುಕುವ ಹಠ ಜಾಗೃತವಾಯಿತು. ಹಸಿವು, ನೀರಡಿಕೆ ಜಾಗೃತವಾಯಿತು. ಮಳೆಯ ಕಾರಣದಿಂದ, ನೀರೇನೋ ಇತ್ತು. ಎಲೆಯಲ್ಲಿ ಸಂಗ್ರಹಿಸಿಕೊಂಡು ಕುಡಿಯುತ್ತಿದ್ದಳು.

ಹುಡುಕಿದಾಗ, ಆಕೆಯ ಪಕ್ಕದ ಒಂದು ಕ್ಯಾಂಡಿ ಬಾಕ್ ಆಕೆಗೆ ಸಿಕ್ಕಿತು. ಬಹುಶಃ ಯಾರೋ ಪ್ರಯಾಣಿಕರದು. ಅದನ್ನೇ ಇಟ್ಟುಕೊಂಡು ಅಲ್ಲಿಂದ ಹೊರಟು ಕಷ್ಟಪಟ್ಟು ಅಮೆಜಾನ್ ಮಳೆಕಾಡಿನಲ್ಲಿ ದಾರಿ ಹುಡುಕಲು ಪ್ರಾರಂಭಿಸಿದಳು. ದಾರಿ ಎಲ್ಲಿತ್ತು? ಅದೃಷ್ಟವಶಾತ್, ಇಂತಹ ಪರಿಸ್ಥಿತಿಯನ್ನು ಎದುರಿಸುವ ಬಗ್ಗೆ ಆಕೆಗೆ ಸಾಮಾನ್ಯರಿಗಿಂತ ಹೆಚ್ಚಿನ ಜ್ಞಾನ ಇತ್ತು.

ಅದು ಬಂದದ್ದು ಅವಳ ಪೋಷಕರಿಂದ. ಅವಳೂ ಸ್ಥಳೀಯ ಮಳೆಕಾಡಿನ ಬಗ್ಗೆ, ಪ್ರಾಣಿಗಳ ಬಗ್ಗೆ ಅಧ್ಯಯನ ಮಾಡಿದ್ದಳು. ಅಲ್ಲಿನ ಸಸ್ಯಗಳು ಮತ್ತು ಪ್ರಾಣಿಗಳ ಬಗ್ಗೆ ಪರಿಚಯವಿತ್ತು. ತಂದೆ ಹೇಳಿದ್ದನ್ನು ನೆನಪಿಸಿಕೊಂಡಳು- ಹರಿಯುವ ನೀರಿನ ಜಾಡನ್ನು ಹಿಂಬಾಲಿಸು. ಅದರ ಪಕ್ಕದಲ್ಲಿ ಎದರೂ ಜನವಸತಿ ಸಿಕ್ಕೇ ಸಿಗುತ್ತದೆ. ಇದು ಮುಂದೆ ಆಕೆಗೆ ನೆರವಾಯಿತು.

ಹೀಗೇ ಎಂಟು ದಿನಗಳು ಸಂದವು. ಮನುಷ್ಯರ ಸದ್ದು-ಸುದ್ದಿಯಿಲ್ಲ. ದಾರಿಗಡ್ಡವಾಗಿ ಉದ್ದುದ್ದದ ಸರ್ಪಗಳು ಸಿಗುತ್ತಿದ್ದವು. ಚಿರತೆಗಳು ಈಕೆಯನ್ನು ಗಮನಿಸಿದ್ದಿರಬೇಕು- ಆದರೆ ತೊಂದರೆ ಕೊಡಲಿಲ್ಲ. ಆದರೆ ಕೀಟಗಳ ಹಾವಳಿ ಬಹಳ. ದೊಡ್ಡ ಸೊಳ್ಳೆಗಳು, ವಿಷಕಾರಿ ಜೇಡಗಳ ತಾಣ.

ಎಂಟು ದಿನದಲ್ಲಿ ಈಕೆಯ ಭುಜದ ಗಾಯಗಳು ಕೊಳೆತು, ಅದರಲ್ಲಿ ಹುಳಗಳು ಮಿಲಮಿಲ ಎನ್ನ ತೊಡಗಿದವು. ಆಪರೇಷನ್ ಮಾಡದಿದ್ದರೆ ಕೈ ಕತ್ತರಿಸುವ ಅಗತ್ಯ ಬೀಳಲಿತ್ತು. ಆ ಹತ್ತು ದಿನಗಳಲ್ಲಿ ಆಕೆ ತನ್ನ ಹಸಿವನ್ನು ನೀಗಿಸಿದ್ದು ತನ್ನ ಬಳಿ ಇದ್ದ ಕ್ಯಾಂಡಿಗಳಿಂದ.

ಮಳೆಗಾಲವಾದ್ದರಿಂದ ಹಣ್ಣುಗಳೂ ಇರಲಿಲ್ಲ. ಕಂಡ ಹಣ್ಣುಗಳನ್ನು ತಿನ್ನದಂತೆ ವಿವೇಕ ಹೇಳಿತು. ಕಾರಣ, ಅವು ವಿಷಕಾರಿ ಆಗಿರುವ ಸಾಧ್ಯತೆ. ತಾಳೆಹಣ್ಣು ಬಿಡಿಸಿ ತಿನ್ನಬಹುದಿತ್ತು, ಆದರೆ ಅವಳ ಬಳಿ ಅದನ್ನು ಬಿಡಿಸಲು ಚಾಕುವಿನಂಥ ಆಯುಧ ಕೂಡ ಇರಲಿಲ್ಲ.

ಒದ್ದಾಡುತ್ತಾ ತೊರೆಯ ಜಾಡನ್ನು ಹಿಂಬಾಲಿಸುತ್ತಾ ಸಾಗಿದಳು ಕೊಪೆಕೆ. ನಿಧಾನವಾಗಿ ತೊರೆಯು ನದಿಯಾಗಿ ಪರಿವರ್ತನೆಯಾಯಿತು. ಹಗಲು ನದಿಯ ಬದಿಯಲ್ಲಿ ನಡೆಯುತ್ತಿದ್ದಳು. ಕೆಲವೊಮ್ಮೆ ನದಿಯಂಚಿನ ನೀರಿನಲ್ಲಿ ನಿಂತ ವಿಷಕಾರಿ ಸ್ಟಿಂಗ್‌ರೇಗಳಿಂದ ಪಾರಾಗಲು ನೀರಿನಲ್ಲಿ ಈಜುತ್ತಿದ್ದಳು. ಕಾಡಿನ ನಡುವೆ ಬಲುಬೇಗ ಕತ್ತಲಾಗುತ್ತಿತ್ತು. ರಾತ್ರಿ ಸಾಧ್ಯವಾದಷ್ಟು ಸುರಕ್ಷಿತ ಜಾಗ ನೋಡಿ ಕೊಂಡು ವಿಶ್ರಾಂತಿ ಪಡೆಯುತ್ತಿದ್ದಳು. ಕೀಟಗಳು ಹೈರಾಣು ಮಾಡುತ್ತಿದ್ದವು.

ತುಸು ನಿದ್ರೆ ಬಿದ್ದರೆ ರುಚಿರುಚಿಯಾದ ತಿಂಡಿ ತಿನಿಸಿನ ಕನಸು ಬೀಳುತ್ತಿತ್ತು. ಹತ್ತನೇ ದಿನದ ಕೊನೆಗೆ, ಸ್ಥಳೀಯ ಅರಣ್ಯ ಕಾರ್ಮಿಕರು ನಿರ್ಮಿಸಿದ್ದ ತಾಳೆ ಎಲೆಗಳ ಛಾವಣಿಯ ಗುಡಿಸಿಲೊಂದು ಸಿಕ್ಕಿತು. ಅಲ್ಲಿ ಅವರು ತಂದಿಟ್ಟ ಒಂದು ಕ್ಯಾನ್ ಪೆಟ್ರೋಲ್ ಕಂಡಿತು. ಅದನ್ನೇ ಭುಜದ ಗಾಯಗಳ ಮೇಲೆ ಸುರಿದುಕೊಂಡು, ಗಾಯದಲ್ಲಿ ಹೊರಳುತ್ತಿದ್ದ ಹುಳಗಳನ್ನು ಒಂದೊಂದಾಗಿ ತೆಗೆದು ಬಿಸಾಕಿದಳು.

ಈ ಹಿಂದೆ ಅವಳ ತಂದೆ ನಾಯಿಯೊಂದರ ಗಾಯದಿಂದ ಹೀಗೆ ಮಾಡಿದ್ದು ಆಕೆಯ ನೆನಪಿನಲ್ಲಿತ್ತು. ನಂತರ ಕೊಪೆಕೆ ಅಲ್ಲಿಯೇ ನಿದ್ರೆಗೆ ಜಾರಿದಳು. ಮರುದಿನ ಬೆಳಿಗ್ಗೆ ಪೆರುವಿನ ಅರಣ್ಯ ಕಾರ್ಮಿಕರು ಅಲ್ಲಿಗೆ ಮರಳಿದಾಗ ಕೊಪೆಕೆಯನ್ನು ನೋಡಿ ಆಶ್ಚರ್ಯಚಕಿತರಾದರು. ಅದೃಷ್ಟ ಆಕೆಯ ಕಡೆಗಿತ್ತು.



ಆಕೆಗೆ ತಂದೆ ಕಲಿಸಿದ ಅಲ್ಪಸ್ವಲ್ಪ ಸ್ಪ್ಯಾನಿಷ್ ಭಾಷೆಯೂ ಗೊತ್ತಿದ್ದರಿಂದ, ತಮ್ಮ ಕತೆಯನ್ನೆಲ್ಲ ಕಾರ್ಮಿಕರಿಗೆ ಹೇಳಲು ಸಾಧ್ಯವಾಯಿತು. ಕೊನೆಗೂ ಅವರ ಸಹಾಯದಿಂದ ಜೋಲಿಯಲ್ಲಿ, ನಂತರ ದೋಣಿಯಲ್ಲಿ ಆ ದುರ್ಗಮ ಕಾಡಿನಿಂದ ಹೊರಬಂದು, ಒಂದು ಹಳ್ಳಿಗೆ ತಲುಪಿದಳು. ನಂತರ ರಕ್ಷಣಾ ಸಿಬ್ಬಂದಿ ಅವಳನ್ನು ವಿಮಾನ ಮೂಲಕ ಕರೆತಂದು ಆಸ್ಪತ್ರೆಗೆ ದಾಖಲಿಸಿದರು. ಈಕೆ ಸತ್ತೇ ಹೋಗಿದ್ದಳೆಂದು ಭಾವಿಸಿದ್ದ ತಂದೆಯೂ ಅಚ್ಚರಿಯಾಗುವಂತೆ ಆಕೆ ಬದುಕಿ ಬಂದಿದ್ದಳು.

ಚೇತರಿಸಿಕೊಂಡ ನಂತರ, ವಿಮಾನ ಪತನವಾದ ಸ್ಥಳವನ್ನು ಪತ್ತೆ ಹಚ್ಚಲು, ತಾಯಿಯ ದೇಹ ಸೇರಿದಂತೆ ಇತರ ಬಲಿಪಶುಗಳ ಶವಗಳನ್ನು ಹೊರ ತೆಗೆಯಲು ರಕ್ಷಣಾ ತಂಡಗಳಿಗೆ ಆಕೆ ಸಹಾಯ ಮಾಡಿದಳು. ಈಗಲೂ ಅವರು ಟೆಡ್ ಟಾಕ್ ಮುಂತಾದ ಕಡೆ ತಮ್ಮ ಕತೆಯನ್ನು ನಿರೂಪಿಸುತ್ತಿರುತ್ತಾರೆ.

ಇದು 55 ವರ್ಷಗಳ ಹಿಂದಿನ ಕತೆಯಾದರೆ, 2023ರಲ್ಲಿ ನಡೆದ ಇನ್ನೊಂದು ಘಟನೆ ನಮ್ಮನ್ನು ಮತ್ತಷ್ಟು ಚಕಿತಗೊಳಿಸುವಂತಿದೆ. ಇದು ಕೊಲಂಬಿಯಾದ ದಟ್ಟ ಕಾಡಿನಲ್ಲಿ ಪತನಗೊಂಡ ವಿಮಾನದಿಂದಲೂ ಉಳಿದು, 40 ದಿನಗಳ ಕಾಲ ಕಾಡಿನಲ್ಲಿ ಜೀವ ಉಳಿಸಿಕೊಂಡ ನಾಲ್ಕು ಮಕ್ಕಳ ಕತೆ. ಅದರಲ್ಲಿ ಒಂದು ಮಗುವಿಗೆ ಆಗಷ್ಟೇ 11 ತಿಂಗಳು.

ಉಳಿದ ಮೂವರು 13, 9 ಮತ್ತು 4 ವರ್ಷದವರು. ಇವರೆಲ್ಲ ಸ್ಥಳೀಯ ಆದಿವಾಸಿಗಳಾದ ಹುಟುಟೊ ಸಮುದಾಯದವರು. ಕಾಡಿನ ಜೀವನವನ್ನು ಆಳವಾಗಿ ಬಲ್ಲವರಾಗಿದ್ದರು. ಅದೇ ಅವರನ್ನು ಬದುಕಿಸಿದ್ದು. ಸಿಂಗಲ್ ಇಂಜಿನ್ ಸಣ್ಣ ಸೆಸ್ನಾ ವಿಮಾನದಲ್ಲಿ ತಮ್ಮ ತಾಯಿಯ ಜೊತೆಗೆ ಪಕ್ಕದ ಪಟ್ಟಣಕ್ಕೆ ಹೊರಟಿದ್ದರು.

ವಿಮಾನ ಛಿದ್ರಗೊಂಡು ಕಾಡಿನೊಳಗೆ ಬಿತ್ತು. ಈ ಮಕ್ಕಳಲ್ಲದೇ ಇನ್ನೂ ಮೂವರು ವಿಮಾನದಲ್ಲಿದ್ದರು. ಇಬ್ಬರು ಸತ್ತು ಹೋದರು. ತಾಯಿ ನಾಲ್ಕು ದಿನಗಳ ಕಾಲ ಜೀವ ಹಿಡಿದುಕೊಂಡಿದ್ದಳು. ನಾಲ್ಕನೇ ದಿನ ಆಕೆಯ ಉಸಿರೂ ನಿಂತಿತು. ಸಾಯುವ ಮೊದಲು, ನನ್ನನ್ನು ಬಿಡಿ, ನೋವು ಹೊರಡಿ ಎಂದು ಆಕೆ ಮಕ್ಕಳಿಗೆ ಹೇಳಿದಳು.

ಮಕ್ಕಳು, ದೊಡ್ಡ ಮಗು ಲೆಸ್ಲಿಯ ನೇತೃತ್ವದಲ್ಲಿ ಕಾಡಿನಲ್ಲಿ ಹೊರಟವು. 16ನೇ ದಿನ ರಕ್ಷಣಾ ಕಾರ್ಯಾಚರಣೆ ತಂಡ ಅಪಘಾತದ ತಾಣ ತಲುಪಿದಾಗ ಮೂವರು ದೊಡ್ಡವರ ಶವಗಳಿದ್ದವು, ಮಕ್ಕಳು ಕಾಣಿಸಲಿಲ್ಲ. ಇಡೀ ಕೊಲಂಬಿಯಾದ ರಕ್ಷಣಾ ಪಡೆಗಳು ಗೊಂಡಾರಣ್ಯದಲ್ಲಿ ಓಡಾಡುತ್ತಾ ಮಕ್ಕಳನ್ನು 40 ದಿನಗಳ ಕಾಲ ಹುಡುಕಾಡಿದವು.

40ನೇ ದಿನದ ಕೊನೆಯಲ್ಲಿ ಪತ್ತೆಯಾದರು. ಅಲ್ಲಿಯವರೆಗೂ ಮಕ್ಕಳು ಕಾಡಿನ ಹಣ್ಣುಗಳು, ಕಸಾವಾ ಎಂಬ ಆಹಾರ, ಬೀಜಗಳನ್ನು ತಿಂದು ಜೀವ ಹಿಡಿದುಕೊಂಡಿದ್ದರು. ಮುಖ್ಯವಾಗಿ ಅವರಿಗೆ ಕಾಡಿನ ಜ್ಞಾನವಿತ್ತು. ಅಪಾಯಗಳಿಂದ ಹೇಗೆ ದೂರವಿರಬೇಕು, ನೀರು ಎಲ್ಲಿ ಸಿಗುತ್ತದೆ, ಯಾವ ಹಣ್ಣು ತಿನ್ನಬಹುದು- ಇಂಥ ಅರಿವು ಹೇರಳವಾಗಿತ್ತು.

ಹಿರಿಯ ಮಗಳು ಲೆಸ್ಲಿ ತನ್ನ ತಮ್ಮ-ತಂಗಿಯರನ್ನು ಅಪಾಯ ಬರದಂತೆ ನೋಡಿಕೊಂಡು ಅಷ್ಟು ದಿನ ಅವರನ್ನು ನಡೆಸಿದ್ದಳು. ಯಾವುದೇ ಸರ್ವೈವಲ್ ಶೋಗಳನ್ನು ಈ ನಿಜ ಕತೆಯ ಮುಂದೆ ನಿವಾಳಿಸಿ ಎಸೆಯಬಹುದು.

ಹೀಗೆ ಹಲವು ಘಟನೆಗಳನ್ನು ನೆನಪಿಸಿಕೊಳ್ಳಬಹುದು. ಮನದಟ್ಟು ಮಾಡಿಕೊಳ್ಳಬೇಕಾದ್ದು ಏನೆಂದರೆ, ಕಾಡಿನೊಳಗೆ ಹೋಗುವ ಮುನ್ನ ಕಾಡಿನ ಬಗ್ಗೆ ಸ್ವಲ್ಪವಾದರೂ ಅರಿವು ಇರಬೇಕು. ಅರಿವು ಇಲ್ಲವಾದರೆ ತಿಳಿದುಕೊಳ್ಳುವ ಪ್ರೀತಿಯಾದರೂ ಇರಬೇಕು. ಸ್ಥಳೀಯರ ಜ್ಞಾನದ ಮುಂದೆ ಕೆಲವೊಮ್ಮೆ ಆಧುನಿಕ ತಂತ್ರಜ್ಞಾನಗಳು ಸೋಲುತ್ತವೆ.

ಡ್ರೋನ್‌ಗಳು ಕಂಡುಹಿಡಿಯಲಾರದ ಶರಣ್ಯಳನ್ನು ಮಲೆಕುಡಿಯರು ಕಂಡುಹುಡುಕಿದ್ದು ಇದಕ್ಕೆ ಉದಾಹರಣೆ. ನಮ್ಮ ಊಹೆ ತರ್ಕಗಳನ್ನೂ ಮೀರಿ ಹಲವೊಮ್ಮೆ ಪವಾಡಸದೃಶ ಘಟನೆಗಳು ನಡೆದು ಬಿಡುತ್ತವೆ. ಅದೃಷ್ಟ ಕೈಕೊಟ್ಟರೆ ಕೆಲವೊಮ್ಮೆ ಚಾರಣವೂ ಮೃತ್ಯುಸದೃಶವಾಗುತ್ತದೆ.

2009ರಲ್ಲಿ ಹೀಗೇ ಆಗಿತ್ತು. ಹಾಸನ ಜಿಲ್ಲೆಯ ಅರಮನೆ ಗುಡ್ಡಕ್ಕೆ ಚಾರಣ ಹೋಗಿದ್ದ ಮೂವರು ವಿದ್ಯಾರ್ಥಿಗಳು ದಾರಿ ತಪ್ಪಿ ನಾಪತ್ತೆಯಾಗಿದ್ದರು. ಮೂರು ತಿಂಗಳ ಬಳಿಕ ಅವರ ಶವಗಳು ದೊರೆತಿದ್ದವು.

**- ಹರೀಶ್** ಕೇರ

## ಕನ್ನಡ ಕವನಗಳು

★★★★★★

### ಬದುಕು

ಓಡವೇ ನೀನು ಭುವಿಗೆ ಬರುವ ಮುನ್ನ
ಬದುಕು ಮೂರಾಬಟ್ಟೆ ಆಗದಿರಲಿ ಎನ್ನ
ನೋಡು ನೋಡುತ್ತಿದ್ದಂತೆ ಬಿದ್ದ ಹನಿ
ಹಾಗೇ ಸುಮ್ಮನೆ ಕನವರಿಕೆ ಜೀವನ ಹಾನಿ
ಬಿತ್ತನೆ ಮಾಡಿದ ಬದುಕು
ನಾಳೆ ಕನಸು ನೂಕು
ಬಯಸಿದ್ದು ಬಂದ ನಂತರ
ನನಗು ನಿನಗೂ ಅಂತರ
ಮತ್ತೆಕೆ ಜಗಳ ಜೂಟಿ
ನಡೆದು ಬಿಡಲಿ ನಾಳೆ ರಾಜಿ
ಜಾರುವ ಮುನ್ನ ಹತ್ತಿರದ ನೆರೆಯವರು
ಬಯಸುವರು ಯೋಗಕ್ಷೇಮ
ಆ ಮೇಲೆ ವಾಪಸ್ ಬೇಕು ಎಂದರೆ
ಕೊಡವರು ಯಾರು ಬೇಸರಿಸದೆ ಮಾತು
ನಿಂದು ನಂದು ಬಂಧು ಬಳಗ
ಅರಿತರೆ ಸಾಕು ಈ ಜಗ
ಹೊರೆಯಾಗದು ಸಂಸಾರ ನೊಗ.

**- ನರಸಿಂಹಪ್ರಸಾದ್ ಎಸ್ ಆರ್.**
ಕುಣಿಗಲ್





ಮನೆಯೊಳಗಿನ ರಾವಣನ ಪ್ರತಿಮೆಗಳ ತರ ಬಹುದು
ಹೊರಗೆ ಹೇಗಾದರೂ
ತಲೆ ಬಗ್ಗಿಸಿಯೋ ಅಥವಾ
ಹೆಗಲ ಹೊರೆಯ ತಗ್ಗಿಸಿಯೋ
ಅಂತೂ ಇಂತೂ ದಾಟಿಸಬಹುದು
ಮುಂಬಾಗಿಲ ಚೌಕಟ್ಟಿನಾಚೆಗೆ
ಹೊಸಿಲ ದಾಟಿಸಿ ತರಬಹುದು;
ಆದರೆ ಹೊರಗೆಳೆಯಲಾದೀತೇ
ಮನದೊಳಡಗಿದ ಅರಿಷಡ್ವೈರಿಗಳೆಂಬ
ದಶಕಂಠನ ದಶಮುಖಗಳ

### ಸಂಯಮ

ಕಳಚಲಾದೀತೇ, ಮನುಜರ
ಮುಖವಾಡಗಳ ಹಲವು
ನಾಟಕಗಳ ಬಯಲಿಗೆಳೆಯಲಾದೀತೇ
ಮನೋನಿಗ್ರಹವ ಸಂಯಮವ
ಸಾಧಿಸಲು ಅಪ್ಪಿಕೊಳಲು
ಬದುಕು ಬಂದಂತೆಯೇ
ಇದ್ದಂತೆಯೇ ಒಪ್ಪಿಕೊಳಲು

**- ಶಾಂತಲಾ ರಾಜಗೋಪಾಲ್**
ಬೆಂಗಳೂರು

### ಕಾಲದ ಜೊತೆ ಪಯಣ

ಕಾಲದ ಜೊತೆ ನಡೆವ ಪ್ರಯಾಣಿಕ
ಸಮಯದ ಮೌಲ್ಯ ತಿಳಿದ ಸಾಧಕ
ನಕಾರಾತ್ಮಕ ಚಿಂತನೆ ಏಳಿಗೆ ಮಾರಕ
ಸಕಾರಾತ್ಮಕ ಮನವು ಜ್ಞಾನಕ್ಕೆ ಪೂರಕ
ಸಮಯದ ಸಹನೆ ನಿನ್ನಲ್ಲಿ ಇರಲಿ
ನಿನಗೆ ಅವಕಾಶಗಳು ಬೆಂಬತ್ತಿ ಬರಲಿ
ಜಗವು ನಿನ್ನನು ನೋಡಿ ಕಲಿಯಲಿ
ಜನರಿಗೆ ನಿನ್ನ ಜೀವನ ಪ್ರೇರಣೆಯಾಗಲಿ
ಕಾಲದ ಜೊತೆ ನಿನಗಿರಲಿ ನಂಟು
ಸಾಧಿಸುವ ಛಲ ನಿನ್ನಲ್ಲಿ ಉಂಟು
ಬದುಕು ಏಳು ಬೀಳುಗಳ ಗಂಟು
ಸಮಾಜದಲ್ಲಿ ಇರಲಿ ಸಾಮರಸ್ಯದ ಅಂಟು



ಸಾಧಕನಿಗೆ ಸಾಧಿಸಲು ಸಮಯವು ಸಕಾಲ
ಭರವಸೆಗೆ ಎಂದಿಗೂ ಬಾರದಿರಲಿ ಬರಗಾಲ
ಆತ್ಮವಿಶ್ವಾಸ ನಂಬಿಕೆ ಇದ್ದರೆ ಉಳಿಗಾಲ
ಕಲಿಯುತ್ತಾ ಮುಂದೆ ಸಾಗು ಇದು ಕಲಿಗಾಲ.

**- ಗೀತಾ ಲೋಕೇಶ್,** ಕಲ್ಲೂರು

# ಗಿಲೋಟಿನ್ ಎಂದರೇನು?

**■ ಗಿಲೋಟಿನ್ ಎಂಬ ಪದವು ಮೂಲತಃ ಸಂಸತ್ತಿಗೆ ಸಂಬಂಧಿಸಿದ್ದಲ್ಲ. ಇದು ಹದಿನೆಂಟನೇ ಶತಮಾನದ ಫ್ರೆಂಚ್ ಕ್ರಾಂತಿಯ ಸಮಯದಲ್ಲಿ ಅಪರಾಧಿಗಳ ಶಿರಚ್ಛೇದ ಮಾಡಲು ಬಳಸುತ್ತಿದ್ದ ಒಂದು ಮರಣ ದಂಡನೆ ಯಂತ್ರದ ಹೆಸರು. ಜೋಸೆಫ್ ಇಗ್ನೇಸ್ ಗಿಲೋಟಿನ್ ಎಂಬ ವೈದ್ಯನ ಹೆಸರಿನಿಂದ ಬಂದ ಈ ಯಂತ್ರವು, ಮೇಲಿನಿಂದ ಕೆಳಕ್ಕೆ ಬೀಳುವ ಚೂಪಾದ ಬ್ಲೇಡ್ ಮೂಲಕ ಕ್ಷಣಾರ್ಧದಲ್ಲಿ ವ್ಯಕ್ತಿಯ ತಲೆಯನ್ನು ದೇಹದಿಂದ ಬೇರ್ಪಡಿಸುತ್ತಿತ್ತು.**

ಸಂಪಾದಕರ ಸದ್ಯಶೋಧನೆ ಲೋಕಸಭೆ ಅಥವಾ ಸಂಸತ್ತಿನ ಕಲಾಪಗಳನ್ನು ಗಮನಿಸುವಾಗ ಅನೇಕ ಪದಗಳು ಕಿವಿಗೆ ಬೀಳುತ್ತವೆ. ಆದರೆ, ಸಾರ್ವಜನಿಕರಿಗೆ ಅಷ್ಟಾಗಿ ಪರಿಚಯವಿಲ್ಲದ, ಆದರೂ ಅತ್ಯಂತ ಶಕ್ತಿಯುತವಾದ ಮತ್ತು ವಿಚಿತ್ರವಾಗಿ ಕೇಳಿಸುವ ಒಂದು ಪದವೆಂದರೆ ಗಿಲೋಟಿನ್. ಇದು ಚರ್ಚೆಯಿಲ್ಲದೆಯೇ ನಡೆಯುವ ಒಂದು ಸರ್ಜಿಕಲ್ ಸ್ಟ್ರೈಕ್ ಇದ್ದಂತೆ!

ಲೋಕಸಭೆಯಲ್ಲಿ ನಡೆಯುವ ಕಲಾಪಗಳು ಅತ್ಯಂತ ಸಂಕೀರ್ಣವಾದ ನಿಯಮಾವಳಿಗಳಿಂದ ಕೂಡಿರುತ್ತವೆ. ಅಲ್ಲಿ ಬಳಸುವ ಪ್ರತಿಯೊಂದು ಪದಕ್ಕೂ ತನ್ನದೇ ಆದ ಸಾಂವಿಧಾನಿಕ ತೂಕವಿರುತ್ತದೆ. ಅಂಥ ಪದಗಳಲ್ಲಿ ಗಿಲೋಟಿನ್ ಕೂಡ ಒಂದು.

ಗಿಲೋಟಿನ್ ಎಂಬ ಪದವು ಮೂಲತಃ ಸಂಸತ್ತಿಗೆ ಸಂಬಂಧಿಸಿದ್ದಲ್ಲ. ಇದು ಹದಿನೆಂಟನೇ ಶತಮಾನದ ಫ್ರೆಂಚ್ ಕ್ರಾಂತಿಯ ಸಮಯದಲ್ಲಿ ಅಪರಾಧಿಗಳ ಶಿರಚ್ಛೇದ ಮಾಡಲು ಬಳಸುತ್ತಿದ್ದ ಒಂದು ಮರಣದಂಡನೆ ಯಂತ್ರದ ಹೆಸರು. ಜೋಸೆಫ್ ಇಗ್ನೇಸ್ ಗಿಲೋಟಿನ್ ಎಂಬ ವೈದ್ಯನ ಹೆಸರಿನಿಂದ ಬಂದ ಈ ಯಂತ್ರವು, ಮೇಲಿನಿಂದ ಕೆಳಕ್ಕೆ ಬೀಳುವ ಚೂಪಾದ ಬ್ಲೇಡ್ ಮೂಲಕ ಕ್ಷಣಾರ್ಧದಲ್ಲಿ ವ್ಯಕ್ತಿಯ ತಲೆಯನ್ನು ದೇಹದಿಂದ ಬೇರ್ಪಡಿಸುತ್ತಿತ್ತು.

ಸಂಸತ್ತಿನಲ್ಲಿಯೂ ಸಹ, ಸುದೀರ್ಘವಾಗಿ ನಡೆಯಬೇಕಾದ ಚರ್ಚೆಯನ್ನು ಒಂದು ನಿಗದಿತ ಸಮಯದಲ್ಲಿ ಇದ್ದಕ್ಕಿದ್ದಂತೆ ಕತ್ತರಿಸಿ, ನೇರವಾಗಿ ಮತದಾನಕ್ಕೆ ಹಾಕುವ ಪ್ರಕ್ರಿಯೆಗೆ ಈ ಹೆಸರನ್ನು ಸಾಂಕೇತಿಕವಾಗಿ ಬಳಸಲಾಗುತ್ತದೆ. ಸಂಸತ್ತಿನಲ್ಲಿ ಇದರ ಅವಶ್ಯಕತೆ ಏನು? ಭಾರತದ ಸಂಸತ್ತಿನಲ್ಲಿ ಪ್ರತಿ ವರ್ಷ ಫೆಬ್ರವರಿಯಲ್ಲಿ ಬಜೆಟ್ ಮಂಡನೆಯಾಗುತ್ತದೆ.

ಬಜೆಟ್ ಮಂಡನೆಯಾದ ನಂತರ ವಿವಿಧ ಸಚಿವಾಲಯಗಳ (ಉದಾಹರಣೆಗೆ, ರಕ್ಷಣೆ, ಶಿಕ್ಷಣ, ಕೃಷಿ ಇತ್ಯಾದಿ) ಹಣಕಾಸಿನ ಬೇಡಿಕೆಗಳ ಬಗ್ಗೆ ಲೋಕಸಭೆಯಲ್ಲಿ ವಿಸ್ತೃತ ಚರ್ಚೆ ನಡೆಯಬೇಕು. ಪ್ರತಿಯೊಂದು ಸಚಿವಾಲಯಕ್ಕೆ ಎಷ್ಟು ಹಣ ನೀಡಬೇಕು ಎಂಬುದನ್ನು ಸಂಸದರು ಚರ್ಚಿಸಿ ನಿರ್ಧರಿಸಬೇಕು. ಆದರೆ, ಭಾರತದಲ್ಲಿ ಸುಮಾರು ಇವತ್ತಕ್ಕೂ ಹೆಚ್ಚು ಸಚಿವಾಲಯಗಳಿವೆ.

ಇವೆಲ್ಲವುಗಳ ಬಗ್ಗೆ ಚರ್ಚಿಸಲು ಸಂಸತ್ತಿಗೆ ಕಾಲಾವಕಾಶ ಇರುವುದಿಲ್ಲ. ಸಾಮಾನ್ಯವಾಗಿ 4–5 ಮುಖ್ಯ ಇಲಾಖೆಗಳ ಬಗ್ಗೆ ಚರ್ಚೆ ನಡೆದ ನಂತರ, ಬಜೆಟ್ ಅಧಿವೇಶನ ಮುಕ್ತಾಯವಾಗುವ ಹಂತಕ್ಕೆ ಬರುತ್ತದೆ. ಆಗ ಉಳಿದ ಎಲ್ಲ ಸಚಿವಾಲಯಗಳ ಅನುದಾನದ ಬೇಡಿಕೆಗಳನ್ನು ಚರ್ಚೆಯಿಲ್ಲದೆಯೇ ಅಂಗೀಕರಿಸಬೇಕಾದ ಅನಿವಾರ್ಯ ಸೃಷ್ಟಿಯಾಗುತ್ತದೆ. ಆಗ ಸ್ಪೀಕರ್ ಗಿಲೋಟಿನ್ ಎಂಬ ಅಸ್ತ್ರವನ್ನು ಬಳಸುತ್ತಾರೆ.

ಪ್ರಕ್ರಿಯೆ ಹೇಗೆ ನಡೆಯುತ್ತದೆ? ಬಜೆಟ್ ಅಧಿವೇಶನದ ಅಂತಿಮ ದಿನದಂದು, ಸಂಜೆ ಸುಮಾರು 5 ಅಥವಾ 6 ಗಂಟೆಗೆ ಸ್ಪೀಕರ್ ಕಲಾಪವನ್ನು ನಿಲ್ಲಿಸಿ, ಇನ್ನುಳಿದ ಎಲ್ಲ ಹಣಕಾಸಿನ ಬೇಡಿಕೆಗಳನ್ನು ಒಂದೇ ಬಾರಿಗೆ ಸದನದ ಮುಂದೆ ಮತದಾನಕ್ಕೆ ಇಡುತ್ತಾರೆ. ಇಲ್ಲಿ ಯಾರೂ ಯಾವುದೇ ಪ್ರಶ್ನೆ ಕೇಳುವಂತಿಲ್ಲ. ಯಾವುದೇ ಟೀಕೆ ಅಥವಾ ವಿಶ್ಲೇಷಣೆಗೆ ಅವಕಾಶವಿರುವುದಿಲ್ಲ.

ಪ್ರತಿಪಕ್ಷದವರು ಮಂಡಿಸಿದ ಕಟ್ ಮೋಷನ್ ಅಥವಾ ಕಡಿತ ನಿರ್ಣಯಗಳೂ ಸಹ ಇಲ್ಲಿ ಗಿಲೋಟಿನ್ ಅಡಿಯಲ್ಲಿ ಚರ್ಚೆಯಿಲ್ಲದೇ ವಜಾಗೊಳ್ಳುತ್ತವೆ. ಕೇವಲ ಹೌದು ಅಥವಾ ಇಲ್ಲ ಎಂಬ ಮತದಾನದ ಮೂಲಕ ಲಕ್ಷಾಂತರ ಕೋಟಿ ರುಪಾಯಿಗಳ ಹಣಕಾಸಿನ ಬೇಡಿಕೆಗಳು ಕ್ಷಣಾರ್ಧದಲ್ಲಿ ಅಂಗೀಕಾರಗೊಳ್ಳುತ್ತವೆ.


ಇಲ್ಲಿ ಗಮನಿಸಬಹುದಾದ ಅಂಶವೆಂದರೆ, ಗಿಲೋಟಿನ್ ಒಂದು ದ್ವಿಮುಖ ಕತ್ತಿ. ಇದು ಸರಕಾರದ ಆಡಳಿತ ಯಂತ್ರ ಸ್ಥಗಿತಗೊಳ್ಳದಂತೆ ನೋಡಿಕೊಳ್ಳುತ್ತದೆ. ಒಂದು ವೇಳೆ ಹಣಕಾಸಿನ ಬೇಡಿಕೆಗಳು ಅಂಗೀಕಾರವಾಗದಿದ್ದರೆ ಸರಕಾರಕ್ಕೆ ಹಣ ಖರ್ಚು ಮಾಡಲು ಅಧಿಕಾರ ಇರುವುದಿಲ್ಲ. ಹಾಗಾಗಿ ಸಾಂವಿಧಾನಿಕ ಬಿಕ್ಕಟ್ಟನ್ನು ತಪ್ಪಿಸಲು ಇದು ಅವಶ್ಯಕ.

ಇದನ್ನು ಪ್ರಜಾಪ್ರಭುತ್ವದ ಕಗ್ಗೊಲೆ ಎಂದು ಹಲವು ಬಾರಿ ಕರೆಯಲಾಗುತ್ತದೆ. ಏಕೆಂದರೆ, ಜನರ ತೆರಿಗೆಯ ಹಣವನ್ನು ಯಾವ ಸಚಿವಾಲಯ ಹೇಗೆ ಖರ್ಚು ಮಾಡುತ್ತದೆ ಎಂದು ಪ್ರಶ್ನಿಸುವ ಸಂಸದರ ಹಕ್ಕನ್ನು ಇದು ಕಸಿದುಕೊಳ್ಳುತ್ತದೆ. ಅನೇಕ ಬಾರಿ ಸರಕಾರಗಳು ಪ್ರತಿಪಕ್ಷದ ಗದ್ದಲದ ನೆಪವೊಡ್ಡಿ ಇಡೀ ಬಜೆಟ್ ಅನ್ನು ಗಿಲೋಟಿನ್ ಮೂಲಕವೇ ಅಂಗೀಕರಿಸಿದ ಉದಾಹರಣೆಗಳಿವೆ.


ಬಜೆಟ್ ಗಿಲೋಟಿನ್ ಆಯಿತು ಎಂದರೆ ಸಂಸತ್ತಿನಲ್ಲಿ ಚರ್ಚೆಗಿಂತ ಗದ್ದಲವೇ ಹೆಚ್ಚಾಗಿತ್ತು ಮತ್ತು ಸರಕಾರವು ಸಂಸದೀಯ ಹೊಣೆಗಾರಿಕೆಯಿಂದ ನುಣುಚಿಕೊಂಡಿತು ಎಂಬ ಅರ್ಥವನ್ನು ಅದು ನೀಡುತ್ತದೆ. ಈ ಪ್ರಕ್ರಿಯೆಯಲ್ಲಿ ಲೋಕಸಭಾ ಸ್ಪೀಕರ್ ಅವರ ಪಾತ್ರ ಬಹಳ ದೊಡ್ಡದು. ಅವರು ಸರಕಾರದೊಂದಿಗೆ ಚರ್ಚಿಸಿ, ಯಾವ ದಿನ ಮತ್ತು ಯಾವ ಸಮಯದಲ್ಲಿ ಗಿಲೋಟಿನ್ ಅನ್ವಯಿಸಬೇಕು ಎಂಬುದನ್ನು ನಿರ್ಧರಿಸುತ್ತಾರೆ.

ಇದು ಸದನದ ಕಾರ್ಯದಕ್ಷತೆಯನ್ನು ಅಳೆಯುವ ಮಾನದಂಡವೂ ಹೌದು. ಹೆಚ್ಚು ಇಲಾಖೆಗಳು ಚರ್ಚೆಯಾಗಿ, ಕಡಿಮೆ ಇಲಾಖೆಗಳು ಗಿಲೋಟಿನ್ ಆದರೆ ಅದು ಯಶಸ್ವಿ ಅಧಿವೇಶನ ಎನಿಸಿ ಕೊಳ್ಳುತ್ತದೆ.

**- ವಿಶ್ವೇಶ್ವರ** ಭಟ್



# ಬದುಕನ್ನು ಆನಂದವಾಗಿಸುವುದು ನಮ್ಮ ಕೈಯಲ್ಲೇ ಇದೆ...



ಅಪರಂಜಿ ಎಂದು ನಂಬಿದವರು ಕಾಗೆ ಬಂಗಾರ ಎಂದು ಅರಿವಿಗೆ ಬಂದ ಮೇಲೆ ಅವರನ್ನು ನಂಬುವುದಾದರೂ ಹೇಗೆ? ಪ್ರತಿಯೋರ್ವರ ಬದುಕಿನಲ್ಲಿ ಒಂದಿಲ್ಲೊಂದು ಈ ರೀತಿಯ ಅನುಭವ ಇದ್ದೇ ಇರುತ್ತದೆ. ಮೊದಲೆಲ್ಲ ಕಷ್ಟವೋ ಸುಖವೋ ದಂಪತಿಗಳು ಪರಸ್ಪರ ಅನುಸರಿಸಿಕೊಂಡು ಹೋಗುತ್ತಿದ್ದರು, ನಾವೆಲ್ಲ ಈ ಗುಂಪಿನವರೇ. ಪತಿಯೇ ದೇವರೆ ನುವುದಿತ್ತು. ತನ್ನವರನ್ನೆಲ್ಲ ತೊರೆದು ಪತಿಯ ಮನೆ ನನ್ನದೇ ಮನೆ, ಇವರೆಲ್ಲರ ಶ್ರೇಯಸ್ಸೇ ತನ್ನ ಜೀವನದ ಹಾದಿ ಎಂದು ಬಂದ ಹೆಣ್ಣುಮಗಳು ಕೈಹಿಡಿದವನು ಕುಡುಕನೋ, ಕುಂಟನೋ, ಹೊಡೆದು ಬಡಿದು ಉಪವಾಸ ಕೆಡಹಿದರೂ ತನ್ನ ಗಂಡ, ಮನೆ, ಮಕ್ಕಳನ್ನು ತೊರೆದು ಹೋಗುತ್ತಿರಲಿಲ್ಲ. ಕೆಲವು ಮನೆಗಳಲ್ಲಿ ಅತ್ತೆ ಎನಿಸಿಕೊಂಡ ಹಿರಿಯರಿಂದ ಹಿಂಸೆ ಅನುಭವಿಸಿದ್ದನ್ನು ನಾನು ಮೊದಲು ಹೇಳುವುದು ಕೇಳಿದ್ದೇನೆ. ಅಂಗಳದ ಕಂಬಕ್ಕೆ ಸೊಸೆಯನ್ನು ಕಟ್ಟಿ ಹಾಕಿ ಗಂಡ, ಮೈದುನರು ಹತ್ತಿರ ಅತ್ತೆಯಾದವರೇ ನಿಂತು ಹೊಡೆಸಿದ್ದು ಸಹ ಉಂಟಂತೆ.(ಈಗ ಎಲ್ಲ ಉಲ್ಟಾ ಆಗಿದೆ) ಹಿರಿಯರು ಹೇಳುವುದನ್ನು ಕೇಳಿದ್ದೇನೆ.(ಇದು ಒಂದು ರೀತಿಯ ಕ್ರೌರ್ಯವೇ ಆಗಿದೆ) ಹಾಗಾಗಿ ಗುಜರಿ, ಹಳೆಯ ಕುರ್ಚಿ, ರಾಹು-ಕೇತು ಪದಗಳ ಪಟ್ಟ ಬಂದದ್ದೋ ಏನೋ. ಅಬ್ಬಾ! ಈಗ ಮಾತನಾಡುವುದು ಬಿಡಿ, ಕಣ್ಣು ಹೊಳಪಿದರೆ ಸಾಕು ಪರಸ್ಪರ ವಿಚ್ಛೇದನವೇ ಗತಿ, ಮಕ್ಕಳು, ಹೆತ್ತವರು, ಮನೆಯ ವೃದ್ಧರು ಬೀದಿ ಪಾಲಾದರೂ ಚಿಂತೆಯಿಲ್ಲ. ದಾಂಪತ್ಯಜೀವನದ ರೀತಿ-ನೀತಿಯಲಿ ಬದಲಾವಣೆ, ತೆರೆದ ಪುಸ್ತಕವಾಗಿ ಮತ್ತು ಆ ಸಂಬಂಧದ ಬಿರುಕು ನಾಲ್ಕು ಗೋಡೆಯ ಮಧ್ಯೆಯಿಂದ ಹೊರ ಬಂದು ಬಹಳ ವರುಷಗಳೇ ಸಂದಿತು. ಪತಿಯಾದವನಿಗೂ ಅಕ್ಕರೆ ಬೇಕು. ಪತ್ನಿಗೂ ಬೇಕು. ಗೊತ್ತಿಲ್ಲದ ವ್ಯವಹಾರಗಳು ದಾಂಪತ್ಯದ ಮೇಲೆ ಪರಿಣಾಮ ಬೀರುವುದು ಸಹಜ. ಆತ್ಮಾವಲೋಕನಕ್ಕೆ ಪುರುಸೊತ್ತಿಲ್ಲ. ಇತರರ ಮಾತುಗಳು ರುಚಿಸದು. ನಂಬಿಕೆ, ವಿಶ್ವಾಸಕ್ಕೆ ದ್ರೋಹವಾಗಿ ಒಮ್ಮೆ ಹೃದಯ ಕಲ್ಲಾದರೆ ಮತ್ತೆಂದೂ ಮೃದುವಾಗದು. ಮೃದುವಾಗಿಸಲು ಪ್ರಯತ್ನಿಸಿದರೂ ಒಡೆದ ಕನ್ನಡಿಯಂತೆ. ಅಹಮಿನ ಪರದೆ ಸರಿಸಲು ಯಾರೂ ತಯಾರಿಲ್ಲ. ತನ್ನದೇ ಸರಿ ಎನ್ನುವ ವಾದ, ಅದನ್ನು ಬೆಂಬಲಿಸುವ ಹೆತ್ತವರನ್ನು ನೋಡುತ್ತಿದ್ದೇವೆ.(ಈಗಿರುವ ಒಂದೆರಡು ಮಕ್ಕಳೆಂಬ ವ್ಯಾಮೋಹ, ಕಳಕೊಂಡರೆ ಸಿಗರೆಂಬ ಯೋಚನೆಯೂ ಇರಬಹುದು) ಸ್ವಲ್ಪ ಸ್ವಾತಂತ್ರ್ಯವೂ ಹೆಚ್ಚಾಗಿ,ಆ ಜಾಗಕ್ಕೆ ಏನು ಮಾಡಿದರೂ ಕೇಳುವವರಿಲ್ಲ ಎನ್ನುವ ಭಾವನೆ ಪ್ರವೇಶಿಸಿದೆ.

ಬಂಧುಗಳೇ, ಇರುವುದೊಂದೇ ಜನುಮ, ಭಗವಂತನ ಕೃಪೆಯಿಂದ ಬಂದಿದ್ದೇವೆ, ವೈಯಕ್ತಿಕ ಮತ್ತು ಸಾಮಾಜಿಕ ಬದುಕನ್ನು ಆನಂದವಾಗಿಸುವುದು ನಮ್ಮ ನಮ್ಮ ಕೈಯಲ್ಲೇ ಇದೆ,ಅರಿತು ಬಾಳೋಣವೇ?


**- ರತ್ನಾ ಭಟ್** ತಲಂಜೇರಿ

# ಮಧುಗಿರಿ ಹೆಸರು ಬಂದ ಕಥೆ!

ಪ್ರತಿಯೊಂದು ಊರಿಗೆ ತನ್ನದೇ ಆದ ವೈಶಿಷ್ಟ್ಯತೆ ಇದ್ದೇ ಇರುತ್ತದೆ. ಆ ಊರಿಗೆ ಆ ಹೆಸರು ಬಂದ ಬಗ್ಗೆ ಹಲವಾರು ರೋಚಕ ಕಥೆ ಇರುತ್ತದೆ. ಪೌರಾಣಿಕವಾಗಿಯೋ, ಐತಿಹಾಸಿಕವಾಗಿಯೋ, ಗಣ್ಯ ವ್ಯಕ್ತಿಯೊಬ್ಬರು ಹುಟ್ಟಿದ ಕಾರಣಕ್ಕೋ, ಆ ಊರಿನಲ್ಲಿ ಬೆಳೆಯುವ ವಿಶೇಷ ಹಣ್ಣಿನ ಅಥವಾ ತರಕಾರಿಯ ಕಾರಣಕ್ಕೋ, ಊರಿನಲ್ಲಿರುವ ಕೆರೆಯ ಕಾರಣಕ್ಕೋ ಆ ಊರಿಗೊಂದು ಹೆಸರು ಬಂದಿರುತ್ತದೆ. ಊರಿಗೆ ಹೆಸರು ಬಂದ ಕಾರಣವು ಬಾಯಿಯಿಂದ ಬಾಯಿಗೆ ಹರಡಿ ಕೊನೆಗೆ ಹೆಸರು ಅಪಾರ್ಥವಾಗಿರುತ್ತದೆ.

ಧರೆಯೊಳೆಲ್ಲೇ ಇರಲಿ ನಾನು ಮರೆಯಲಾರೆ ಮಧುಗಿರಿ ಎಂದು ಹೊಯ್ಸಳ ಕವಿಯೊಬ್ಬ ಹಾಡಿ ಹೊಗಳಿದ್ದಾನೆ. ನಿಮ್ಮ ಊಹೆ ನಿಜ, ನಾನು ಹೇಳ ಹೊರಟಿರುವುದು ಕರ್ನಾಟಕ ರಾಜ್ಯದ ತುಮಕೂರು ಜಿಲ್ಲೆಯ ಮಧುಗಿರಿ ಎಂಬ ಊರಿನ ಬಗ್ಗೆ. ಪುರಾಣ ಪ್ರಸಿದ್ಧ ಊರಾದ ಮಧುಗಿರಿಗೆ ಆ ಹೆಸರು ಬರಲು ಕಾರಣವಾದರೂ ಏನು ಗೊತ್ತೇ?

ಪ್ರಾಚೀನ ಕಾಲದಲ್ಲಿ ಮಧುಗಿರಿಯನ್ನು ಮದ್ದಗಿರಿ ಎಂದು ಕರೆಯುತ್ತಿದ್ದರಂತೆ. ಕಾಲಾಂತರದಲ್ಲಿ ಇದು ಮದ್ದಗಿರಿ ಆಯಿತು. ಮದ್ದಗಿರಿ ಎಂಬ ಊರಿನ ಹೆಸರನ್ನು ತೆಲುಗು ಭಾಷಿಕರು ಇಂಗ್ಲೀಷಿನಲ್ಲಿ ಬರೆದು ಅಸಹ್ಯೋಕ್ತಿಯಾಗಿ ಉಚ್ಚರಿಸುತ್ತಿದ್ದುದನ್ನು ಗಮನಿಸಿದ ಅಂದಿನ ಉಪ ವಿಭಾಗಾಧಿಕಾರಿಯಾಗಿದ್ದ ಕನ್ನಡದ ಆಸ್ತಿ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು 1927ರಲ್ಲಿ ಈ ಮದ್ದಗಿರಿಯನ್ನು ಮಧುಗಿರಿ ಎಂದು ಬದಲಾಯಿಸಿಬಿಟ್ಟರು. ಅದಕ್ಕೆ ಅವರು ಕೊಟ್ಟ ಕಾರಣ ಅಲ್ಲಿದ್ದ ಸುಂದರ ಬೆಟ್ಟಗಳ ಸಾಲು (ಗಿರಿ) ಮತ್ತು ಹೇರಳವಾಗಿ ಸಿಗುತ್ತಿದ್ದ ರುಚಿಕರವಾದ ಜೇನು (ಮಧು). ಈ ಎರಡು ಪದಗಳನ್ನು ಜೊತೆ ಸೇರಿಸಿ ಮಧುಗಿರಿ ಎಂದು ಮರು ನಾಮಕರಣ ಮಾಡಿದರು. ನಂತರದ ದಿನಗಳಲ್ಲಿ ಮಧುಗಿರಿ ಎಂಬ ಹೆಸರೇ ದಾಖಲೆಗಳಲ್ಲಿ ಸೇರಿಹೋಗಿ ಅದೇ ಶಾಶ್ವತ ನಾಮಕರಣವಾಯಿತು.



ನಿಮಗೆ ಗೊತ್ತಿದೆಯೋ ಇಲ್ಲವೋ ಮೈಸೂರು ಮಹಾರಾಜರು ಮಧುಗಿರಿ ಎಂದು ನಾಮಕರಣಕ್ಕೂ ಮುನ್ನ ಇದನ್ನು ಪ್ರಸನ್ನಗಿರಿ ಎಂದು ಕರೆಯುತ್ತಿದ್ದರು. ಇಲ್ಲಿನ ಬೆಟ್ಟ ಗುಡ್ಡಗಳು ಚಾರಣ ಪ್ರಿಯರಿಗೆ ಸ್ವರ್ಗವೆನಿಸಿವೆ. ಏಷ್ಯಾ ಖಂಡದ ಎರಡನೇ ಅತೀ ದೊಡ್ಡ ಏಕಶಿಲಾ ಬೆಟ್ಟವು ಇರುವುದು ನಮ್ಮ ಮಧುಗಿರಿಯಲ್ಲೇ. ಹಾಗಾದರೆ ನಿಮ್ಮ ಊರಿಗೆ ಆ ಹೆಸರು ಬಂದ ಕಥೆಯೇನಾದರೂ ನಿಮಗೆ ಗೊತ್ತಿದ್ದರೆ ಬರೆದು ತಿಳಿಸಿ.

